ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

24 ಏಪ್ರಿಲ್ 2026 ಶುಕ್ರವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 45 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629




ಮುಂಬೈ ಇಂಡಿಯನ್ಸ್ ವಿರುದ್ಧ ಗುರುವಾರ ನಡೆದ ಐಪಿಎಲ್ ಪಂದ್ಯದಲ್ಲಿ ಅಜೇಯ ಶತಕ (101 ರನ್) ಗಳಿಸಿದ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಸಂಜು ಸ್ಯಾಮ್ಸನ್... ಮುಂಬೈಗೆ 208 ರನ್ ಗುರಿ...




ಕರ್ನಾಟಕದ ಅಸ್ಮಿತೆಯ ಶಿಲ್ಪಿ ವರನಟ ಡಾ.ರಾಜಕುಮಾರ್ » 2



ಬೀಳದ ಹದ ಮಳೆ : ಕಾಫಿ ಬೆಳೆಗಾರರಿಗೆ ಸಂಕಷ್ಟ » 3



ಪಕ್ಷ ವಿರೋಧಿ ಚುಟವಟಿಕೆ ಮಾಡಿದ್ದರೆ ಕ್ರಮ ಜರುಗಿಸಲಿ » 4


# ರಾಜ್ಯದಲ್ಲಿ ಬಾಲಿಶ, ಹುಂಬುತನ ರಾಜಕಾರಣ


## ಸಿಎಂ ಸ್ಥಾನದ ಪೈಪೋಟಿಯೇ ಮೇಲುಗೈ | ಕಾಂಗ್ರೆಸ್ ವಿರುದ್ಧ ಹೆಚ್.ಡಿ. ಕುಮಾರಸ್ವಾಮಿ ವಾಗ್ದಾಳಿ

• ಪ್ರಜೋದಯ ವರದಿ

**ಹೊಳೆನರಸೀಪುರ:** ರಾಜ್ಯದಲ್ಲಿ ಕಳೆದ 6 ತಿಂಗಳಿಂದ ಮುಖ್ಯಮಂತ್ರಿ ಸ್ಥಾನಕ್ಕೆ ಪೈಪೋಟಿ ವಿಚಾರವೇ ಮೇಲುಗೈ ಸಾಧಿಸುತ್ತಿದೆ. ಇತ್ತೀಚೆಗೆ ಮಾಟ ಮಂತ್ರದ ರಾಜಕಾರಣವೂ ನಡೆಯುತ್ತಿರುವುದು ಬಹಳ ಬಾಲಿಶವೆಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಟೀಕಿಸಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಂದೆಯೂ ನಾವೇ ಅಧಿಕಾರಕ್ಕೆ ಬರುತ್ತೇವೆಂಬ ಹುಂಬುತನ ರಾಜ್ಯದ ಆಡಳಿತ ಪಕ್ಷದವರಲ್ಲಿದ್ದು, ಅವರು ಕನಸು ಕಾಣುತ್ತಿದ್ದಾರೆ. ಬೇಸಿಗೆಯ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರಿದ್ದರೂ ಬಗೆಹರಿಸುವ ಬಗ್ಗೆ ಯಾರೊಬ್ಬರೂ ಮಾತನಾಡುತ್ತಿಲ್ಲ. ಕೇವಲ ಗ್ಯಾರಂಟಿ ಯೋಜನೆಗಳನ್ನೇ ನಂಬಿಕೊಂಡು ಕುಳಿತಿದ್ದಾರೆಂದು ಹೇಳಿದರು.

ಮೇಕೆದಾಟು ಯೋಜನೆ ಜಾರಿಗೊಳಿಸುವುದಾಗಿ ರಾಜ್ಯದ ಜನರಿಗೆ ಭರವಸೆ ನೀಡಿ, ತಮಿಳುನಾಡಿಗೆ ಹೋಗಿ ತಮ್ಮ ಮಿತ್ರ ಪಕ್ಷದ ಪರವಾಗಿ



" ನಾನು ಮುಖ್ಯಮಂತ್ರಿ ಆಕಾಂಕ್ಷಿ ಎಂದು ಹೇಳಲ್ಲ. ಹಾಗೆ ಹೇಳಿದರೆ ಕೂಸು ಹುಟ್ಟುವ ಮೊದಲು ಕುಲಾವಿ ಹೊಲಿಸಿಕೊಂಡರು ಎನ್ನುವ ಗಾದೆಯಂತಾಗುತ್ತದೆ. ಕೆಲವರು ಅಭಿಮಾನಿಗಳು ಹೇಳುತ್ತಾರೆ. ಅದನ್ನು ಗಂಭೀರವಾಗಿ ಪರಿಗಣಿಸಬೇಕಾದ ಅಗತ್ಯ ಇಲ್ಲ. ನನಗೆ ರಾಜ್ಯ ಉಳಿಯಬೇಕಷ್ಟೇ.

-ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ವೀರಾವೇಶದ ಭಾಷಣ ಮಾಡುತ್ತಾರೆ. ಅವರು ನೋಡಿದರೆ ಕೋರ್ಟ್‌ಗೆ ಹೋಗಿ ಪದೇ ಪದೇ ಅಡಚಣೆ ಮಾಡುತ್ತಿದ್ದಾರೆ. ಕಡೆಗೆ ಬಿಜೆಪಿ ಪಕ್ಷದ ಮೇಲೆ ದೂರು ಹೇಳುತ್ತಾರೆಂದು ದೂರಿದರು.

**ಕೆಪಿಎಸ್‌ಸಿ ವಿವಾದದ ಮೇಲೆ ಆಕ್ರೋಶ**

ಕೆಪಿಎಸ್‌ಸಿ ನೇಮಕಾತಿ ಅವ್ಯವಹಾರಗಳ ಕುರಿತು ತೀವ್ರ ಆಕ್ರೋಶ ವ್ಯಕ್ತಪಡಿಸಿದ ಅವರು, ಒಂದು ಹುದ್ದೆಗೆ ಕೋಟಿ ರೂ. ವಸೂಲಿ ಮಾಡಿದರೆ ಯುವಕರ ಬದುಕಿನೊಂದಿಗೆ ಚೆಲ್ಲಾಟವಾಡಿದಂತಾಗುತ್ತದೆ. ನಂತರ ಸದನ ಸಮಿತಿ ರಚಿಸಿ ಸಮಸ್ಯೆ ಪರಿಹರಿಸುವುದು ನಾಟಕೀಯ ಕ್ರಮ. ಸಚಿವ ಕೃಷ್ಣಬೈರೇಗೌಡ ಅವರ ಉತ್ತರ ಕೇಳಿದರೆ ಅಬ್ಬಬ್ಬಾ ಎನಿಸುತ್ತದೆ. ಕೆಪಿಎಸ್‌ಸಿ ಸದನ ಸಮಿತಿ ಮಾಡಿ ಕಾಂಗ್ರೆಸ್‌ನ 7 ಜನ ಸದಸ್ಯರಂತೆ, ಬಿಜೆಪಿ 3 ಜನ ಸದಸ್ಯರಂತೆ, ನಮ್ಮ ಪಕ್ಷದಿಂದಲೂ ಹೆಸರು ಕೇಳಿದ್ದಾರೆ. 17 ರಿಂದ 18 ಜನ ಸದಸ್ಯರನ್ನು ಮಾಡಿ ಏನು ಮಾಡುತ್ತಾರೆ. ಸದನ ಸಮಿತಿಯಲ್ಲಿ ಕುಳಿತು ಕೊಳಕು ತೊಳೆಯುವ ಕೆಲಸ ಮಾಡುತ್ತೀರಾ ಅಥವಾ ಕಳ್ಳಕಾಕರ ರಕ್ಷಣೆ ಮಾಡುತ್ತೀರಾ ಎಂದು ಪ್ರಶ್ನಿಸಿದರು.

**ನಮ್ಮ ಪಕ್ಷಕ್ಕೆ ಅಂತಹವರ ಅಗತ್ಯವಿಲ್ಲ**

ಸಚಿವ ಜಮೀರ್ ಅಹಮದ್ ಮತ್ತೆ ಜೆಡಿಎಸ್ ಸೇರ್ಪಡೆ ವಿಚಾರವಾಗಿ ಪ್ರತಿಕ್ರಿಯಿಸಿ, ಆ ವಿಷಯವನ್ನು ಗಂಭೀರವಾಗಿ ತೆಗೆದುಕೊಳ್ಳುವ ಅಗತ್ಯವಿಲ್ಲ. ನಮ್ಮ ಪಕ್ಷಕ್ಕೆ ಅಂತಹವರ ಅಗತ್ಯವಿಲ್ಲ. ನಾವು ಈಗಾಗಲೇ ಅನುಭವ ಪಡೆದಿದ್ದೇವೆ. ಅಧಿಕಾರಕ್ಕಾಗಿ ಯಾವುದೇ ರೀತಿಯ ಸಂದಾನಕ್ಕೆ ಹೋಗುವುದಿಲ್ಲವೆಂದು ಸ್ಪಷ್ಟಪಡಿಸಿದ ಅವರು, ಪಕ್ಷದ ತತ್ವಗಳಿಗೆ ವಿರುದ್ಧವಾಗುವವರನ್ನು ಸೇರಿಸಿಕೊಳ್ಳುವುದಿಲ್ಲವೆಂದು ಸ್ಪಷ್ಟಪಡಿಸಿದರು.

**ಉಚಿತ ಯೋಜನೆಗಳ ಸ್ಪರ್ಧೆ**

ಪಂಚ ರಾಜ್ಯಗಳ ಚುನಾವಣಾ ಪ್ರಕ್ರಿಯೆಯನ್ನು ಗಮನಿಸಿದಾಗ ಅಭಿವೃದ್ಧಿ ವಿಚಾರಗಳಿಗಿಂತ ಉಚಿತ ಯೋಜನೆಗಳ ಸ್ಪರ್ಧೆಯೇ ಹೆಚ್ಚಾಗುತ್ತಿರುವುದು ಆಶ್ಚರ್ಯಕಾರಿಯಾಗಿದೆ. ಅಭಿವೃದ್ಧಿ ಹೆಸರಿನಲ್ಲಿ ಮತ ಕೇಳುವ ಪರಿಪಾಠ ಕಡಿಮೆಯಾಗುತ್ತಿದೆ. ಒಂದು ಪಕ್ಷ ಉಚಿತ ಯೋಜನೆ ಘೋಷಿಸಿದರೆ, ಮತ್ತೊಂದು ಪಕ್ಷ ಅದಕ್ಕಿಂತ ಹೆಚ್ಚಿನ ಉಚಿತ ನೀಡುವುದಾಗಿ ಸ್ಪರ್ಧೆ ನಡೆಸುತ್ತಿದೆ ಎಂದು ಟೀಕಿಸಿದರು.

ಇತ್ತೀಚೆಗೆ ರಾಜಕೀಯದಲ್ಲಿ ಭಾಷೆಯ ಮಟ್ಟ ಕುಸಿದಿದೆ. ದೇಶದ ಪ್ರಧಾನಮಂತ್ರಿ ಬಗ್ಗೆ ಕಾಂಗ್ರೆಸ್ ಪಕ್ಷದ ಅಧ್ಯಕ್ಷರು ಅವಹೇಳನಕಾರಿ ಪದಗಳನ್ನು ಬಳಸುವುದು ಸರಿಯಲ್ಲ. ರಾಜಕೀಯದಲ್ಲಿ ಗೌರವ ಪೂರ್ವಕ ಪದ ಬಳಕೆ ಅವಶ್ಯಕ ಎಂದು ಖರ್ಗೆ ಅವರಿಗೆ ಟಾಂಗ್ ನೀಡಿದರು.

ಮಹಿಳಾ ಮೀಸಲಾತಿ ಕುರಿತಾದ ಪ್ರಶ್ನೆಗೆ ಪ್ರತಿಕ್ರಿಯಿಸಿ, ದೇವೇಗೌಡರು ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ಮಹಿಳಾ ಮೀಸಲಾತಿ ಜಾರಿಗೆ ತಂದವರು, ಕಾಂಗ್ರೆಸ್‌ನವರಲ್ಲ. ಹಲವು ಬಾರಿ ಡಿ ಲಿಮಿಟೇಷನ್ ಆಗಿದೆ. ಕಮಿಟಿಯಲ್ಲಿ ಒಬ್ಬರು ನಿವೃತ್ತ ನ್ಯಾಯಾಧೀಶರು ಇರುತ್ತಾರೆ. ಗೃಹ ಸಚಿವರು ಲೋಕಸಭೆಯಲ್ಲಿ ಸದನದಲ್ಲಿ ಇಟ್ಟು ಅನುಮೋದನೆ ಪಡೆದುಕೊಳ್ಳಬೇಕು. ಕಾಂಗ್ರೆಸ್‌ನವರು ದಕ್ಷಿಣ ಭಾರತಕ್ಕೆ ಅನ್ಯಾಯವಾಗಿದೆ ಎಂದು ಹೇಳುತ್ತಾರೆ. ಇಂತಿಂತ ರಾಜ್ಯಕ್ಕೆ ಇಷ್ಟಿಷ್ಟು ಸಂಸದ ಸ್ಥಾನ ಎಂದು ಹೇಳಲಾಗಿದೆ. ಮತ್ತೆ ಹೇಗೆ ಸ್ಥಾನಗಳು ಕಡಿಮೆಯಾಗುತ್ತವೆ ಎಂದು ಪ್ರಶ್ನಿಸಿದರು.

## ಹೆಚ್.ಡಿ.ದೇವೇಗೌಡರಿಗೆ ಬಸವಶ್ರೀ ಪ್ರಶಸ್ತಿ

• ಪ್ರಜೋದಯ ವರದಿ



**ಬೆಂಗಳೂರು:** ಬಸವ ವೇದಿಕೆ ವತಿಯಿಂದ ನೀಡುವ 2026ನೇ ಸಾಲಿನ ಬಸವಶ್ರೀ ಪ್ರಶಸ್ತಿಗೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ, ವಚನ ಸಾಹಿತ್ಯಶ್ರೀ ಪ್ರಶಸ್ತಿಗೆ ಶಿಕ್ಷಣ ತಜ್ಞ ಗುರುರಾಜ ಕರಜಗಿ ಅವರನ್ನು ಆಯ್ಕೆ ಮಾಡಲಾಗಿದೆ.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಬಸವ ವೇದಿಕೆಯ ಅಧ್ಯಕ್ಷ ಸಿ. ಸೋಮಶೇಖರ್ ಅವರು, ಬಸವಶ್ರೀ ಪ್ರಶಸ್ತಿಯು ಬಸವಣ್ಣನವರ ಪುತ್ಥಳಿ, ಸ್ಮರಣಿಕೆ ಒಳಗೊಂಡಿದೆ. ವಚನ ಸಾಹಿತ್ಯಶ್ರೀ ಪ್ರಶಸ್ತಿಯು 10 ಸಾವಿರ ರೂ. ನಗದು ಹಾಗು ಸ್ಮರಣಿಕೆ ಒಳಗೊಂಡಿದೆ ಎಂದು ತಿಳಿಸಿದರು.

ಏ.27ರಂದು ಸಂಜೆ 5.30ಕ್ಕೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿರುವ ಬಸವ ಜಯಂತಿ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಸುತ್ತೂರು ಮಠದ ಪೀಠಾಧ್ಯಕ್ಷ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಕೇಂದ್ರ ಸಚಿವ ವಿ. ಸೋಮಣ್ಣ ಸಮಾರಂಭ ಉದ್ಘಾಟಿಸಲಿದ್ದಾರೆ. ಸಂಸದ ಬಸವರಾಜ ಬೊಮ್ಮಾಯಿ, ಕಾನೂನು ಸಚಿವ ಹೆಚ್.ಕೆ.ಪಾಟೀಲ ಅವರು ಪ್ರಶಸ್ತಿ ಪ್ರದಾನ ಮಾಡುವರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಬಸವ ಜ್ಯೋತಿ ವಿಶೇಷ ಸಂಚಿಕೆ ಬಿಡುಗಡೆ ಮಾಡಲಿದ್ದಾರೆಂದು ಮಾಹಿತಿ ನೀಡಿದರು.

## ಇಟಿಎಫ್ ಸಿಬ್ಬಂದಿ ಮೇಲೆ ಕಾಡಾನೆ ದಾಳಿ

**ಬೇಲೂರು:** ಕಾಡಾನೆಗಳ ಚಲನವಲನದ ಮೇಲೆ ನಿಗಾ ವಹಿಸುತ್ತಿದ್ದ ಮೂವರು ಇಟಿಎಫ್ ಸಿಬ್ಬಂದಿ ಮೇಲೆ ಕಾಡಾನೆ ದಾಳಿ ಮಾಡಿದ ಘಟನೆ ತಾಲ್ಲೂಕಿನ ಚೀಕನಹಳ್ಳಿ ಗ್ರಾಮದ ಹಾಸ್ಟೆಲ್ ಹಿಂಭಾಗದಲ್ಲಿ ನಡೆದಿದೆ.

ಗಾಯಗೊಂಡ ಗಾರ್ಡ್ ರಮೇಶ್ ಸ್ಥಿತಿ ಗಂಭೀರವಾಗಿದೆ. ಸಿಬ್ಬಂದಿ ವಿಶ್ವ ಹಾಗು ಜೀವನ್ ಅವರು ಸಹ ದಾಳಿಯಲ್ಲಿ ಗಾಯಗೊಂಡಿದ್ದಾರೆ. ಮೂವರು ಗಾಯಾಳುಗಳನ್ನು ಹಾಸನ ಹಿಮ್ಸ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಆಸ್ಪತ್ರೆಗೆ ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಆರೋಗ್ಯ ವಿಚಾರಿಸಿದ್ದಾರೆ.

# ಉದ್ಯೋಗ ಸೃಷ್ಟಿಗೆ ಜಿಲ್ಲೆಯಲ್ಲಿ ಕೈಗಾರಿಕೆ ಸ್ಥಾಪಿಸಿ

## ಕೇಂದ್ರ ಸಚಿವರಿಗೆ ಹೆಚ್.ಡಿ.ರೇವಣ್ಣ ಒತ್ತಾಯ

• ಪ್ರಜೋದಯ ವರದಿ

**ಹೊಳೆನರಸೀಪುರ:** ಜಿಲ್ಲೆಯಲ್ಲಿ ಉದ್ಯೋಗ ಸೃಷ್ಟಿಗಾಗಿ ದೊಡ್ಡ ಕೈಗಾರಿಕೆಗಳನ್ನು ಸ್ಥಾಪಿಸುವ ಅಗತ್ಯವಿದೆ. ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಒಂದೆರಡು ಕಾರ್ಖಾನೆಗಳನ್ನು ಸ್ಥಾಪಿಸಿದರೆ ಕನಿಷ್ಠ 25 ಸಾವಿರ ಯುವಕರಿಗೆ ಉದ್ಯೋಗಾವಕಾಶ ಕಲ್ಪಿಸಬಹುದೆಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಒತ್ತಾಯಿಸಿದರು.

ತಾಲ್ಲೂಕಿನ ಉದ್ದೂರು ಹೊಸಳ್ಳಿ ಗ್ರಾಮದಲ್ಲಿ ಗುರುವಾರ ನಡೆದ ಶ್ರೀ ವೀರಾಂಜನೇಯ ಸ್ವಾಮಿ ನೂತನ ದೇವಾಲಯದ ಜೀರ್ಣೋದ್ಧಾರ, ಸ್ಥಿರಬಿಂಬ ಪ್ರತಿಷ್ಠಾಪನೆ ಹಾಗು ವಿಮಾನ ಗೋಪುರ ಮತ್ತು ಕಳಸ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ರೈತರ ಸಾಲ ಮನ್ನಾ ಮಾಡಿರುವ ನಾಯಕರು ಈ ದೇಶದಲ್ಲಿ ಯಾರಾದರೂ ಇದ್ದರೆ ಕುಮಾರಸ್ವಾಮಿ ಅವರು ಮಾತ್ರ. ಹೊಳೆನರಸೀಪುರ ಕ್ಷೇತ್ರದ ಅಭಿವೃದ್ಧಿಗೆ ಅವರು ನೀಡಿರುವ ಕೊಡುಗೆಗಳನ್ನು ಉಲ್ಲೇಖಿಸಿ, ಸಮುದಾಯ ಆಸ್ಪತ್ರೆಗಳ ಸ್ಥಾಪನೆಗೆ ಹೆಚ್.ಡಿ.ದೇವೇಗೌಡ ಅವರ ಪಾತ್ರವನ್ನು ಸ್ಮರಿಸಿದರು.

ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಅವರು, ಈ ಸರ್ಕಾರದಲ್ಲಿ ರಸ್ತೆ ಗುಂಡಿಗಳು ಹಾಗು ಕುಡಿಯುವ ನೀರಿನ ಸಮಸ್ಯೆ ಗಂಭೀರವಾಗಿದೆ. ನಾನು ಸಚಿವನಾಗಿದ್ದಾಗ ವಿದ್ಯುತ್ ದರ ಹೆಚ್ಚಿಸಿಲ್ಲ. ಆದರೆ, ಇಂದಿನ ಸರ್ಕಾರ ದರ ಹೆಚ್ಚಿಸಿದೆ. ತಮ್ಮ ಅವಧಿಯಲ್ಲಿ ರೈತರಿಗೆ ಹಾಗು ಜನರಿಗೆ ಅನುಕೂಲವಾಗುವಂತೆ ಕಡಿಮೆ ದರದಲ್ಲಿ ಟ್ರಾನ್ಸ್‌ಫಾರ್ಮರ್‌ಗಳನ್ನು ನೀಡಲಾಗಿತ್ತು.



ಈಗಿನ ಸರ್ಕಾರ ರೈತರಿಗೆ ಯಾವುದೇ ಸೌಲಭ್ಯ ಕಲ್ಪಿಸಿಲ್ಲವೆಂದು ಟೀಕಿಸಿದರು.

ಚನ್ನರಾಯಪಟ್ಟಣ, ಹೊಳೆನರಸೀಪುರ ಮಾರ್ಗವಾಗಿ ಕುಶಾಲನಗರದ ರೈಲ್ವೆ ಮಾರ್ಗ ವಿಸ್ತಾರಣಾ ಕಾಮಗಾರಿ ಕೈಗೆತ್ತಿಕೊಳ್ಳಲಾಗುತ್ತದೆ. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಪ್ರಯತ್ನದ ಫಲ ಕೈಗೂಡುವ ಕಾಲ ಸನ್ನಿಹತವಾಗಿದೆ. ಹಳ್ಳಿಮೈಸೂರು ಹೋಬಳಿ ವ್ಯಾಪ್ತಿಯ ಈ ಪ್ರದೇಶದ ಜನತೆಗೆ ಏತ ನೀರಾವರಿ ಯೋಜನೆಯ ನಾಲೆಗಳ ಅಭಿವೃದ್ಧಿಗಾಗಿ 450 ಕೋ.ರೂ. ಬಲದಂಡೆ ನಾಲೆ ಅಭಿವೃದ್ಧಿಗೆ ಮತ್ತೆ 450 ಕೋ.ರೂ ವೆಚ್ಚ ಮಾಡಲಾಗಿದೆ ಎಂದು ಹೇಳಿದರು.

ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಸಾಕಷ್ಟು ಶಾಲಾ, ಕಾಲೇಜುಗಳನ್ನು ರಾಜ್ಯದಲ್ಲಿ ಸ್ಥಾಪಿಸಲಾಗಿದೆ. ಮೊಸಳೆಹೊಸಹಳ್ಳಿ ಇಂಜಿನೀಯರಿಂಗ್ ಕಾಲೇಜಿನಲ್ಲಿ ಕಂಪ್ಯೂಟರ್ ಸೈನ್ಸ್ 60 ಸೀಟುಗಳಿತ್ತು. ಪ್ರಸ್ತುತ 90 ಸೀಟುಗಳಿಗೆ ಹೆಚ್ಚುವರಿಗೊಳಿಸಿ ಅನುಮತಿ ಕೊಡಿಸಿದ್ದೇನೆ. ಕೃತಕ ಬುದ್ಧಿ ಮತ್ತೆ, ಇನ್ನಿತರೆ ಸೀಟುಗಳನ್ನು ಹೆಚ್ಚುವರಿಯಾಗಿ ಅನುಮತಿ ದೊರತಿದೆ. ವಿದ್ಯಾರ್ಥಿಗಳು ಅವಕಾಶವನ್ನು ಪಡೆದುಕೊಳ್ಳಬೇಕೆಂದರು.

## ರಾಮ ರಾಜ್ಯ ಕನಸು ಸಾಕಾರಗೊಳಿಸಲು ಸಹಕರಿಸಿ

**ಹಾಸನ:** ರಾಜ್ಯದ ಎಲ್ಲರೂ ನಮ್ಮ ಮೇಲೆ ವಿಶ್ವಾಸವಿಟ್ಟು ನಮಗೆ ಸ್ವತಂತ್ರವಾಗಿ ಅಧಿಕಾರ ನಡೆಸಲು ಅವಕಾಶ ಮಾಡಿಕೊಟ್ಟರೆ ರಾಮ ರಾಜ್ಯದ ಕನಸು ಸಾಕಾರಗೊಳಿಸಲು ಶ್ರಮಿಸುತ್ತೇನೆಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಹೇಳಿದರು.

ತಾಲ್ಲೂಕಿನ ಕಟ್ಟಾಯ ಹೋಬಳಿ ದೊಡ್ಡಬೀಕನಹಳ್ಳಿ ಗ್ರಾಮದಲ್ಲಿ ಆಂಜನೇಯ ಸ್ವಾಮಿ ದೇವಾಲಯ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ರಾಮ ರಾಜ್ಯದ ಆಡಳಿತ ಬರಬೇಕೆಂದರೆ ನಿಮ್ಮೆಲ್ಲರ ಆಶೀರ್ವಾದ ಬೇಕು. ನಾವು ಎನ್‌ಡಿಎ ಜೊತೆ ಮೈತ್ರಿ ಮಾಡಿಕೊಂಡಿದ್ದೇವೆ. ಮುಂದಿನ ತೀರ್ಮಾನಗಳ ಕುರಿತು



ಚರ್ಚಿಸುತ್ತೇವೆಂದರು.

ರಾಜ್ಯ ಹಾಗು ರಾಷ್ಟ್ರ ಮಟ್ಟದಲ್ಲಿ ಓಡಾಟವೇ ಆದ್ದರಿಂದ ಹಾಸನ ಜಿಲ್ಲೆಯಲ್ಲಿ ನಾನು ಹೆಚ್ಚು ದಿನ ಕಳೆಯಲು ಆಗಲಿಲ್ಲ. ಮುಂದಿನ ದಿನಗಳಲ್ಲಿ ಜಿಲ್ಲೆಯಲ್ಲೇ ಹೆಚ್ಚಿನ ಅವಧಿ ಇರುತ್ತೇನೆಂದು ಭರವಸೆ ನೀಡಿದರು.

» ನಾಲ್ಕನೇ ಪುಟದಲ್ಲಿ

# ರಾಜ್ಯದಲ್ಲಿ ಆರ್ಥಿಕ ಅಸಮಾನತೆ : ಹೆಚ್.ಡಿ. ಕುಮಾರಸ್ವಾಮಿ

## ಗ್ಯಾರಂಟಿ ಪರಿಣಾಮ ಪ್ರತಿ ಪ್ರಜೆ ಮೇಲೆ 1 ಲ.ರೂ. ಸಾಲದ ಹೊರೆ: ಸರ್ಕಾರದ ವಿರುದ್ಧ ಟೀಕೆ

• ಪ್ರಜೋದಯ ವರದಿ

**ಹೊಳೆನರಸೀಪುರ:** ರಾಜ್ಯದಲ್ಲಿ ಒಂದು ಕಡೆ ಶ್ರೀಮಂತಿಕೆ ಹೆಚ್ಚಾಗುತ್ತಿದ್ದರೆ, ಮತ್ತೊಂದು ಕಡೆ ಗ್ರಾಮೀಣ ಭಾಗದ ಜನರು ಆರ್ಥಿಕವಾಗಿ ಹಿಂದುಳಿಯುತ್ತಿರುವ ಸ್ಥಿತಿ ಕಳವಳಕಾರಿಯಾಗಿದೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಹೇಳಿದರು.

ತಾಲ್ಲೂಕಿನ ಉದ್ದೂರು ಹೊಸಳ್ಳಿ ಗ್ರಾಮದಲ್ಲಿ ಗುರುವಾರ ನಡೆದ ಶ್ರೀ ವೀರಾಂಜನೇಯ ಸ್ವಾಮಿ ನೂತನ ದೇವಾಲಯದ ಜೀರ್ಣೋದ್ಧಾರ, ಸ್ಥಿರಬಿಂಬ ಪ್ರತಿಷ್ಠಾಪನೆ, ವಿಮಾನ ಗೋಪುರ ಮತ್ತು ಕಳಸ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶ ಆರ್ಥಿಕವಾಗಿ ಅಭಿವೃದ್ಧಿಯತ್ತ ಸಾಗುತ್ತಿದ್ದು, ಜಿಡಿಪಿ ಪ್ರಮಾಣವೂ ಏರಿಕೆಯಾಗುತ್ತಿದೆ. ವಿಶ್ವದ ಮೂರನೇ ಅತೀ ದೊಡ್ಡ ಆರ್ಥಿಕತೆಯಾಗಿ ಭಾರತ ಹೊರಹೊಮ್ಮುವ ಹಂತದಲ್ಲಿದೆ. ಆದರೂ ಜನಸಾಮಾನ್ಯರ ಬದುಕಿನಲ್ಲಿ ಆ ಅಭಿವೃದ್ಧಿಯ ಪ್ರತಿಫಲನ ಕಾಣಿಸುತ್ತಿಲ್ಲ. ರಸ್ತೆಗಳಲ್ಲಿ ಸಂಚರಿಸುವ ವಾಹನಗಳನ್ನು ನೋಡಿದರೆ ಹಣದ ಕೊರತೆ ಕಾಣುವುದಿಲ್ಲ. ಆದರೆ, ಹಳ್ಳಿಗಳಲ್ಲಿ ಜನರು ಇನ್ನೂ ಸಂಕಷ್ಟದಲ್ಲಿದ್ದಾರೆ. ಒಂದು ವರ್ಗ ವಾರಾಂತ್ಯಗಳಲ್ಲಿ ರೆಸಾರ್ಟ್, ಹೋಂಸ್ಟೇಗಳಿಗೆ ಹೋಗುತ್ತಿದ್ದರೆ, ಮತ್ತೊಂದು ವರ್ಗ ಬದುಕಿಗಾಗಿ ಹೋರಾಟ ಮಾಡುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಜನರು ಎಷ್ಟೇ ವಿದ್ಯೆ ಕಲಿತರೂ, ಎಷ್ಟೇ ಹಣ ಗಳಿಸಿದರೂ ಕೊನೆಯಲ್ಲಿ ದೇವರನ್ನೇ ಆಶ್ರಯಿಸುತ್ತಾರೆ. ಕಷ್ಟ ಬಂದಾಗ ದೇವರೇ ಕಾಪಾಡಲಿ ಎಂದು ಪ್ರಾರ್ಥಿಸುತ್ತಾರೆ. ತಿರುಪತಿ,

» ನಾಲ್ಕನೇ ಪುಟದಲ್ಲಿ



**ದೇವೇಗೌಡರ ಕನಸು ನನಸು ಮಾಡಲು ಶ್ರಮ**

ನನ್ನ ತಂದೆ, ತಾಯಿ ಮಾಡಿದ ಪುಣ್ಯ ಮತ್ತು ಅವರ ದುಡಿಮೆ, ಶ್ರಮದಿಂದ ನಾನಿಂದು ಈ ಮಟ್ಟಕ್ಕೆ ಬಂದಿದ್ದೇನೆ. ಜನತೆಯ ಆಶೀರ್ವಾದ ನನ್ನ ಮೇಲೆ ಇದೆ. ನನ್ನ ತಂದೆಯ ಕನಸು ರಾಜ್ಯದ ಜನರ ಪರಿಸ್ಥಿತಿ ಉತ್ತಮವಾಗಬೇಕೆಂದು ಅದಕ್ಕಾಗಿ ನಾನು ಶ್ರಮಿಸಬೇಕಿದೆ. ನಾನು ರಾಜಕೀಯಕ್ಕೆ ಬರಬೇಕೆಂದು ಬಯಸಿರಲಿಲ್ಲ. ಪರಿಸ್ಥಿತಿಗಳು ನನ್ನನ್ನು ಈ ಕ್ಷೇತ್ರಕ್ಕೆ ಎಳೆದುಕೊಂಡು ಬಂದವು. ಹೆಚ್.ಡಿ.ದೇವೇಗೌಡ ಅವರ ಕನಸುಗಳನ್ನು ನನಸು ಮಾಡಲು ನನಗೆ ಹಲವು ಬಾರಿ ದೇವರು ಜೀವ ನೀಡಿದ್ದಾರೆಂದು ಭಾವನಾತ್ಮಕವಾಗಿ ಹೇಳಿದರು.

## ಅಪಘಾತ : ಮಹಿಳೆ ಸಾವು

**ಚನ್ನರಾಯಪಟ್ಟಣ:** ಗೂಡ್ಸ್ ಹಾಗು ಕಾರು ನಡುವೆ ಸಂಭವಿಸಿದ ಅಪಘಾತದಲ್ಲಿ ಮಹಿಳೆಯೊಬ್ಬರು ಮೃತಪಟ್ಟು, ಐವರು ಗಾಯಗೊಂಡಿರುವ ಘಟನೆ ತಾಲ್ಲೂಕಿನ ಬೀರೂರು ಸಮೀಪ ನಡೆದಿದೆ.ಹಾಸನದ ವಿವೇಕ ನಗರ ನಿವಾಸಿ ಸಾವಿತ್ರಮ್ಮ ಸಾವನ್ನಪ್ಪಿದ್ದಾರೆ. ಅಕ್ಷತಾ, ಅನಿಶ್ ಗೌಡ, ಅರ್ಪಿತ, ಚಾರಿತ್ರ್ಯ, ಕಾರು ಚಾಲಕ ಗಣೇಶ್ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಬುಧವಾರ ಅಗ್ರಹಾರದಿಂದ ತಂದೆ ಗಣೇಶ್ ಹಾಗು ತಾಯಿ ಸಾವಿತ್ರಮ್ಮ ಅವರೊಂದಿಗೆ ಅಕ್ಷತಾ, ಅರ್ಪಿತ ಹಾಗು ಅವರ ಮಕ್ಕಳು ಕಾರಿನಲ್ಲಿ ತೆರಳುತ್ತಿದ್ದರು. ಬೀರೂರು ಸಮೀಪ ಹೋಗುತ್ತಿದ್ದಾಗ ಮುಂದೆ ಹೋಗುತ್ತಿದ್ದ ಗೂಡ್ಸ್ ವಾಹನದ ಚಾಲಕ ಸೂಚನೆ ನೀಡದೆ ಏಕಾಏಕಿ ರಸ್ತೆ ಮಧ್ಯದಲ್ಲಿ ಬ್ರೇಕ್ ಹಾಕಿದ್ದರಿಂದ ಹಿಂದಿನಿಂದ ತೆರಳುತ್ತಿದ್ದ ಕಾರು ಡಿಕ್ಕಿಯಾಗಿದೆ. ಗಂಭೀರ ಗಾಯಗೊಂಡಿದ್ದ ಸಾವಿತ್ರಮ್ಮ ಮೃತಪಟ್ಟಿದ್ದಾರೆ.

## ಎಸ್‌ಎಸ್‌ಎಲ್‌ಸಿ : ಹೆಚ್.ಆರ್. ಚರಿತ್ರ ಜಿಲ್ಲೆಗೆ ದ್ವಿತೀಯ

• ಪ್ರಜೋದಯ ವರದಿ

**ಹಾಸನ:** ನಗರದ ಬ್ರಿಲಿಯಂಟ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿನಿ ಹೆಚ್.ಆರ್.ಚರಿತ್ರ ಅವರು 622 ಅಂಕ ಪಡೆದು ರಾಜ್ಯಕ್ಕೆ ನಾಲ್ಕನೇ ಹಾಗು ಜಿಲ್ಲೆಗೆ ದ್ವಿತೀಯ ಸ್ಥಾನ ಪಡೆದಿ ದ್ದಾರೆ.

ಶಾಲೆಯ 8 ವಿದ್ಯಾರ್ಥಿಗಳು 600ಕ್ಕೂ ಹೆಚ್ಚು ಅಂಕ ಪಡೆದಿದ್ದಾರೆ. 26 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈ ಬಾರಿಯೂ ಒಟ್ಟು ಫಲಿತಾಂಶ ಶೇ.100 ರಷ್ಟು ಫಲಿತಾಂಶ ಬಂದಿದ್ದು, ಶಾಲೆಯ ಆಡಳಿತ ಮಂಡಳಿ ಎಲ್ಲಾ ವಿದ್ಯಾರ್ಥಿಗಳು, ಶಿಕ್ಷಕರು, ಪೋಷಕರನ್ನು ಅಭಿನಂದಿಸಿದೆ.



ಫಲಿತಾಂಶ ಪ್ರಕಟವಾಗುತ್ತಿದ್ದಂತೆ ಶಾಲೆಗೆ ಭೇಟಿ ನೀಡಿದ ಶಾಸಕ ಹೆಚ್.ಪಿ. ಸ್ವರೂಪ್ ಹೆಚ್.ಆರ್.ಚರಿತ್ರ (622 ಅಂಕ), ಎಸ್.ಎ.ಚೇತನ್ (615) ಮತ್ತು ಎ.ಡಿ.ಪ್ರಜ್ವಲ್ (612) ಅವರನ್ನು ಅಭಿನಂದಿಸಿದರು.

ಈ ವೇಳೆ ಮಾತನಾಡಿದ ಸ್ವರೂಪ್ ಅವರು, ವಿದ್ಯಾರ್ಥಿಗಳು ಹೆಚ್ಚು ಅಂಕ ಗಳಿಸುವ ಮೂಲಕ ಜಿಲ್ಲೆಗೆ ಕೀರ್ತಿ ತಂದಿದ್ದಾರೆ. ಮುಂದಿನ ದಿನಗಳಲ್ಲಿ ಇನ್ನಷ್ಟು ವಿದ್ಯಾರ್ಥಿಗಳು ಅತ್ಯಧಿಕ ಅಂಕ ಗಳಿಸುವ ನಿಟ್ಟಿನಲ್ಲಿ ಪ್ರೋತ್ಸಾಹಿಸಬೇಕು. ವಿದ್ಯಾರ್ಥಿಗಳ ಭವಿಷ್ಯ ಉಜ್ವಲವಾಗಿರಲಿ ಎಂದು ಶುಭ ಹಾರೈಸಿದರು.

## 623 ಅಂಕ ಪಡೆದ ಸುಮೇಧ ಮೌರ್ಯ ಜಿಲ್ಲೆಗೆ ಪ್ರಥಮ | 19,041 ವಿದ್ಯಾರ್ಥಿಗಳ ಪೈಕಿ 18,566 ಮಂದಿ ಉತ್ತೀರ್ಣ

# ಎಸ್‌ಎಸ್‌ಎಲ್‌ಸಿ ಫಲಿತಾಂಶ: ಜಿಲ್ಲೆಗೆ ನಾಲ್ಕನೇ ಸ್ಥಾನ

• ಪ್ರಜೋದಯ ವರದಿ

**ಹಾಸನ:** ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶದಲ್ಲಿ ಜಿಲ್ಲೆ ರಾಜ್ಯದಲ್ಲಿ ನಾಲ್ಕನೇ ಸ್ಥಾನ ಪಡೆದುಕೊಂಡಿದೆ. ಕಳೆದ ಬಾರಿ 6ನೇ ಸ್ಥಾನದಲ್ಲಿದ್ದು, ಈ ಬಾರಿ ಎರಡು ಸ್ಥಾನ ಜಿಗಿತ ಕಂಡಿದೆ. ಆಲೂರು ತಾಲ್ಲೂಕು ಬೈರಾಪುರ ಬೆತಸ್ಥಾ ಶಾಲೆಯ ಬಿ.ಎಸ್.ಸುಮೇಧ ಮೌರ್ಯ 625ಕ್ಕೆ 623 ಅಂಕ ಗಳಿಸುವ ಮೂಲಕ ಜಿಲ್ಲೆಗೆ ಮೊದಲ ಸ್ಥಾನ ಪಡೆದುಕೊಂಡಿದ್ದಾನೆ.

ಜಿಲ್ಲೆಯಲ್ಲಿ ಒಟ್ಟು 19,041 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, 18,566 (ಶೇ.97.51) ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಕೇವಲ 475 ವಿದ್ಯಾರ್ಥಿಗಳು ಅನುತ್ತೀರ್ಣ ರಾಗಿದ್ದು, 2024-25ನೇ ಸಾಲಿನಲ್ಲಿ ಶೇ.90.88 ರಷ್ಟು ಫಲಿತಾಂಶ ಬಂದಿತ್ತು. ಈ ಬಾರಿ ಶೇ.7ರಷ್ಟು ಹೆಚ್ಚಳ ಕಂಡಿದೆ.

ತಾಲ್ಲೂಕುವಾರು ಫಲಿತಾಂಶದಲ್ಲಿ ಸಕಲೇಶಪುರ ತಾಲ್ಲೂಕು ಮೊದಲ ಸ್ಥಾನ ಪಡೆದುಕೊಂಡಿದೆ. ಚನ್ನರಾಯಪಟ್ಟಣ ದ್ವಿತೀಯ, ಆಲೂರು ತೃತೀಯ ಸ್ಥಾನ ಪಡೆದುಕೊಂಡಿದೆ. ಬೇಲೂರು ತಾಲ್ಲೂಕು ಕೊನೆಯ ಸ್ಥಾನಕ್ಕೆ ಕುಸಿದಿದೆ.

**ಬಾಲಕಿಯರೇ ಮೇಲುಗೈ**

ಫಲಿತಾಂಶದಲ್ಲಿ ಹುಡುಗಿಯರು ಈ ಬಾರಿಯೂ ಮೇಲುಗೈ ಸಾಧಿಸಿದ್ದಾರೆ. ಪರೀಕ್ಷೆಗೆ ಒಟ್ಟು 9,424 ಬಾಲಕರು ಹಾಜರಾಗಿದ್ದು, 9,086 ಮಂದಿ (ಶೇ.96) ಉತ್ತೀರ್ಣರಾಗಿದ್ದಾರೆ. 9,618 ಬಾಲಕಿಯರಲ್ಲಿ 9,481 ಮಂದಿ (ಶೇ.98.58) ತೇರ್ಗಡೆಯಾಗಿದ್ದಾರೆ. ನಗರ ಹಾಗು ಗ್ರಾಮೀಣ ಪ್ರದೇಶಗಳ ಫಲಿತಾಂಶದಲ್ಲಿ ಗ್ರಾಮೀಣ ಪ್ರದೇಶದ ಮಕ್ಕಳು ಉತ್ತಮ ಸಾಧನೆ ಮಾಡಿದ್ದಾರೆ. ಗ್ರಾಮಾಂತರ ಭಾಗದ 12,330 ವಿದ್ಯಾರ್ಥಿಗಳಲ್ಲಿ 12,078 (ಶೇ.97.96), ನಗರ ಪ್ರದೇಶದ 6,712 ವಿದ್ಯಾರ್ಥಿಗಳಲ್ಲಿ 6,488 (ಶೇ.96.66) ರಷ್ಟು ವಿದ್ಯಾರ್ಥಿಗಳು ಪಾಸಾಗಿದ್ದಾರೆ.

**ಖಾಸಗಿ ಶಾಲೆಗಳೇ ಮುಂದು**

ಸರ್ಕಾರಿ, ಅನುದಾನ ರಹಿತ, ಅನುದಾನಿತ ಶಾಲೆಗಳಲ್ಲಿ ಖಾಸಗಿ (ಅನುದಾನ ರಹಿತ) ಶಾಲೆಗಳೇ ಉತ್ತಮ ಸಾಧನೆ ಮಾಡಿವೆ. ಅನುದಾನ ರಹಿತ 168 ಶಾಲೆಗಳಿಂದ ಒಟ್ಟು 5,748 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, 5,717 ವಿದ್ಯಾರ್ಥಿಗಳು ತೇರ್ಗಡೆಗೊಂಡಿದ್ದಾರೆ. ಕೇವಲ 31 ವಿದ್ಯಾರ್ಥಿಗಳ ಮಾತ್ರ ಅನುತ್ತೀರ್ಣರಾಗಿದ್ದಾರೆ. ಶೇ.99.46ರಷ್ಟು ಫಲಿತಾಂಶ ಬಂದಿದೆ. 214 ಸರ್ಕಾರಿ ಶಾಲೆಗಳಿಂದ ಒಟ್ಟು 8,950 ವಿದ್ಯಾರ್ಥಿಗಳ ಪೈಕಿ 8,737 (ಶೇ.97.62) ಮಂದಿ ಉತ್ತೀರ್ಣರಾಗಿ 213 ಮಂದಿ ಅನುತ್ತೀರ್ಣರಾಗಿದ್ದಾರೆ. 127 ಅನುದಾನಿತ ಶಾಲೆಗಳ 4,334 ವಿದ್ಯಾರ್ಥಿಗಳಲ್ಲಿ 4,112 ವಿದ್ಯಾರ್ಥಿಗಳು (ಶೇ. 94.68) ಪಾಸಾಗಿದ್ದಾರೆ.

**ತಾಲ್ಲೂಕುವಾರು ಫಲಿತಾಂಶ**

- ಸಕಲೇಶಪುರ- ಶೇ.99.17
- ಚನ್ನರಾಯಪಟ್ಟಣ-ಶೇ.98.22
- ಆಲೂರು- ಶೇ.98.12
- ಅರಕಲಗೂಡು- ಶೇ.97.39
- ಅರಸೀಕೆರೆ- ಶೇ.97.37
- ಹೊಳೆನರಸೀಪುರ-ಶೇ.96.87
- ಹಾಸನ-ಶೇ.96.67
- ಬೇಲೂರು-ಶೇ.95.59

**475 ವಿದ್ಯಾರ್ಥಿಗಳಿಗೆ 600 ಮೇಲ್ಪಟ್ಟು ಅಂಕ**

625 ಅಂಕಗಳಿಗೆ ಜಿಲ್ಲೆಯಲ್ಲಿ ಒಟ್ಟು 475 ವಿದ್ಯಾರ್ಥಿಗಳು 600ಕ್ಕೂ ಹೆಚ್ಚು ಅಂಕಗಳನ್ನು ಪಡೆದುಕೊಂಡಿದ್ದಾರೆ. ಆ ಪೈಕಿ ಹಾಸನದಲ್ಲಿ 149 ವಿದ್ಯಾರ್ಥಿಗಳು, ಚನ್ನರಾಯಪಟ್ಟಣ 69, ಆಲೂರು 15, ಅರಕಲಗೂಡು 35, ಅರಸೀಕೆರೆ 90, ಬೇಲೂರು 33, ಹೊಳೆನರಸೀಪುರ 35 ಹಾಗು ಸಕಲೇಶಪುರ ತಾಲ್ಲೂಕಿನ 49 ವಿದ್ಯಾರ್ಥಿಗಳು 600ಕ್ಕೂ ಹೆಚ್ಚು ಅಂಕಗಳನ್ನು ಪಡೆದುಕೊಂಡು ಉನ್ನತ ಶ್ರೇಣಿಯಲ್ಲಿ ಸಾಧನೆ ಮಾಡಿದ್ದಾರೆ. ಮಾಧ್ಯಮವಾರು ಫಲಿತಾಂಶದಲ್ಲಿ ಇಂಗ್ಲೀಷ್ ಮಾಧ್ಯಮದ ವಿದ್ಯಾರ್ಥಿಗಳು ಶೇ.98.73ರಷ್ಟು ಪ್ರಮಾಣದೊಂದಿಗೆ ಮುನ್ನಡೆ ಸಾಧಿಸಿದ್ದಾರೆ. ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು ಶೇ.95.61 ರಷ್ಟು ಮತ್ತು ಉರ್ದು ಮಾಧ್ಯಮದವರು ಶೇ.80.77ರಷ್ಟು ಸಾಧನೆ ಮಾಡಿದ್ದಾರೆ.

**ಬಿ+ ಶ್ರೇಣಿ ಪಡೆದವರೇ ಹೆಚ್ಚು**

ಗ್ರೇಡ್ ವಿಂಗಡಣೆಯಲ್ಲಿ ಹೆಚ್ಚು ವಿದ್ಯಾರ್ಥಿಗಳು ಬಿ+ (ಶೇ.7079) ಶ್ರೇಣಿಯಲ್ಲಿ ಸ್ಥಾನ

» ನಾಲ್ಕನೇ ಪುಟದಲ್ಲಿ

### ಈ ವರ್ಷದ ಜಿಲ್ಲೆಯ ಟಾಪರ್‌ಗಳು



ಸುಮೇಧ ಮೌರ್ಯ

ಆಲೂರು ತಾಲ್ಲೂಕು ಬೈರಾಪುರ ಬೆತಸ್ಥಾ ಶಾಲೆಯ ಬಿ.ಎಸ್. ಸುಮೇಧ ಮೌರ್ಯ 625ಕ್ಕೆ 623 ಅಂಕಗಳನ್ನು ಪಡೆದು ಮೊದಲ ಸ್ಥಾನ ಪಡೆದುಕೊಂಡಿದ್ದಾನೆ.

ಅರಕಲಗೂಡು ತಾಲ್ಲೂಕು ಕೊಣನೂರು ಕಿತ್ತೂರು ರಾಣಿಚೆನ್ನಮ್ಮ ವಸತಿ ಶಾಲೆಯ ಕೆ.ಆರ್.ಸನಾ 622, ಹಾಸನ ಬ್ರಿಲಿಯಂಟ್ ಶಾಲೆಯ ಹೆಚ್.ಆರ್.ಚರಿತ್ರಾ 622, ಯುನೈಟೆಡ್ ಶಾಲೆಯ ನಿರೂಪ್ ಬಾಬು 622, ವಿಜಯ ಶಾಲೆಯ ಆರ್.ಪುಣ್ಯ 622, ಬೇಲೂರು ತಾಲ್ಲೂಕಿನ ಸರ್ವೋದಯ ಕಾನ್ವೆಂಟ್‌ನ ಆದಿತ್ಯಗೌಡ 621, ಚನ್ನರಾಯಪಟ್ಟಣ ತಾಲ್ಲೂಕಿನ ರಾಧಕೃಷ್ಣ ಶಾಲೆಯ ವಿ.ಎನ್.ಭೂಮಿಕಾ 621, ಹಾಸನದ ಪೂರ್ಣಪ್ರಜ್ಞ ಶಾಲೆಯ ದವನ್‌ಗೌಡ 621, ಬೇಲೂರು ಪಟ್ಟಣದ ಸೆಂಟ್‌ಥೆರೇಸ್ಸ್ ಶಾಲೆಯ ಲಿಖಿತಾ 621, ಅರಸೀಕೆರೆ ತಾಲ್ಲೂಕು ಗಂಡಸಿ ಪುಷ್ಪರವಿ ನ್ಯಾಷನಲ್ ಶಾಲೆಯ ಎಸ್.ಇಂಚರಾ 621 ಅಂಕಗಳನ್ನು ಪಡುಕೊಳ್ಳುವ ಮೂಲಕ ಜಿಲ್ಲಾ ಟಾಪರ್‌ಗಳಾಗಿ ಹೊರ ಹೊಮ್ಮಿದ್ದಾರೆ.



ನಿರೂಪ್ ಬಾಬು ಯು.ಕೆ. | ಪುಣ್ಯ ಆರ್. | ಚರಿತ ಹೆಚ್.ಆರ್. | ಸನಾ ಕೆ.ಆರ್.

## ಎನ್‌ಡಿಎ ಸರ್ಕಾರದ ತುಘಲಕ್ ನೀತಿಗೆ ಸೋಲು





• ಪ್ರಜೋದಯ ವರದಿ

**ಹಾಸನ:** ಮಹಿಳಾ ಮೀಸಲಾತಿ ಮಸೂದೆ ಅಂಗೀಕಾರ ನೆಪದಲ್ಲಿ ಕ್ಷೇತ್ರಗಳ ಪುನರ್ ವಿಂಗಡಣೆ ಮಸೂದೆ ಜಾರಿಗೊಳಿಸಲು ಯತ್ನಿಸಿದ ಎನ್‌ಡಿಎ ಸರ್ಕಾರದ ಕುತಂತ್ರ ನೀತಿಗೆ ಕಾಂಗ್ರೆಸ್ ತಕ್ಕ ಪಾಠ ಕಲಿಸಿದೆ. ಕೇಂದ್ರ ಸರ್ಕಾರದ ತುಘಲಕ್ ಆಡಳಿತವನ್ನು ಸಹಿಸುವುದಿಲ್ಲವೆಂದು ಕಾಂಗ್ರೆಸ್ ಮಹಿಳಾ ಘಟಕ ಜಿಲ್ಲಾಧ್ಯಕ್ಷೆ ತಾರಾ ಚಂದನ್ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ರಾಜಕೀಯದಲ್ಲಿ ಮಹಿಳಾ ಮೀಸಲಾತಿಯನ್ನು ಕಾಂಗ್ರೆಸ್ ಹಾಗು ಮಿತ್ರ ಪಕ್ಷಗಳು ಯಾವತ್ತಿಗೂ ವಿರೋಧಿಸಿಲ್ಲ. ವಿರೋಧ ಪಕ್ಷಗಳ ವಿಶ್ವಾಸ ಪಡೆಯದೆ ಕ್ಷೇತ್ರಗಳ ಪುನರ್ ವಿಂಗಡಣೆಗೆ ಮುಂದಾಗಿರುವುದು ಅಕ್ಷಮ್ಯ ಎಂದರು.

2023ರಲ್ಲೇ ಮಹಿಳಾ ಮೀಸಲಾತಿ ಮಸೂದೆಗೆ ಅಂಗೀಕಾರ ಪಡೆಯಲಾಗಿದೆ. ಈಗ ಅದನ್ನು ಮತ್ತೊಮ್ಮೆ ಪ್ರಸ್ತಾಪಿಸಿರುವ ಔಚಿತ್ಯ ಏನೆಂಬುದು ಅರ್ಥವಾಗುತ್ತಿಲ್ಲ. ಮಹಿಳಾ ಮೀಸಲಾತಿಯನ್ನು ಜಾರಿಗೊಳಿಸುವುದು ಕೇಂದ್ರ ಸರ್ಕಾರದ ಉದ್ದೇಶವಾಗಿದ್ದರೆ ಇಷ್ಟು ವರ್ಷಗಳ ಕಾಲ ಕಾಯುವ ಅವಶ್ಯಕತೆ ಇರಲಿಲ್ಲ. ರಾಜೀವ್ ಗಾಂಧಿ ಅವರು ಪ್ರಧಾನಿ ಆಗಿದ್ದಾಗ ಆರ್ಟಿಕಲ್ 74, 75ಕ್ಕೆ ತಿದ್ದುಪಡಿ ತಂದು ಸ್ತ್ರೀಯರಿಗೆ ಶೇ.33ರಷ್ಟು ಮೀಸಲಾತಿ ಕಲ್ಪಿಸಿದ್ದಾರೆ. ಬಿಜೆಪಿಯವರಿಂದ ಮಹಿಳಾ ಸ್ವಾತಂತ್ರ್ಯದ ಅರ್ಥ ತಿಳಿದುಕೊಳ್ಳುವ ಅವಶ್ಯಕತೆ ಕಾಂಗ್ರೆಸ್‌ಗೆ ಇಲ್ಲವೆಂದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರ ಭಾವನೆಗಳಿಗೆ ಬೆಲೆ ಕೊಡುವುದು ಸರ್ಕಾರದ ಕರ್ತವ್ಯ. ಕ್ಷೇತ್ರ ಪುನರ್ ವಿಂಗಡಣೆಯಿಂದ ದಕ್ಷಿಣದ ರಾಜ್ಯಗಳಿಗೆ ಅನ್ಯಾಯವಾಗುತ್ತದೆ. ಹಿಂದುಳಿದ ವರ್ಗಗಳಿಗೂ ಈ ನೀತಿಯಿಂದ ತೊಂದರೆಯಾಗುತ್ತಿದೆ. ಆದರೆ, ಎನ್‌ಡಿಎ ಸರ್ಕಾರ ರಾಜಕೀಯ ಲಾಭಕ್ಕಾಗಿ ತರಾತುರಿಯಲ್ಲಿ ಮಸೂದೆ ಅಂಗೀಕಾರಕ್ಕೆ ಮುಂದಾಗಿದೆ. ಈ ಸರ್ಕಾರಕ್ಕೆ ಮಹಿಳಾಪರ ಕಾಳಜಿ ಇದ್ದರೆ ಮೊದಲು ಮಹಿಳಾ

» ನಾಲ್ಕನೇ ಪುಟದಲ್ಲಿ

C M Y K C M Y K C M Y K C M Y K

# ಸಿನಿ ಪ್ರಭ

# ಕರ್ನಾಟಕದ ಅಸ್ಮಿತೆಯ ಶಿಲ್ಪಿ -ವರನಟ ಡಾ. ರಾಜಕುಮಾರ್



ಕರ್ನಾಟಕದ ನೆಲ, ಭಾಷೆ, ಸಂಸ್ಕೃತಿಯ ಪ್ರತಿರೂಪವಾಗಿ, ಸರಳತೆಯ ಮೂರ್ತ ರೂಪವಾಗಿ, ಅಭಿನಯದ ವಿರಾಟರೂಪದಿಂದ ಕನ್ನಡಿಗರ ಹೃದಯ ಸಿಂಹಾಸನದ ಅನಿಭಷಕ್ತ ದೊರೆಯಾಗಿ ನೆಲೆ ನಿಂದವರು ಡಾ. ರಾಜ ಕುಮಾರ್, ಅವರು ಕೇವಲ ಕಲಾವಿದರಲ್ಲ ಅವರು ನಾಡಿನ ಅಸ್ಮಿತೆಯ ಪ್ರತೀಕವಾಗಿದ್ದರು.

ಕನ್ನಡವೇ ಸತ್ಯ, ಕನ್ನಡವೇ ನಿತ್ಯ ಎಂಬ ಭಾವನೆಗೆ ಜೀವ ತುಂಬಿದ ಜೀವನ್ಮುಖಿ ರಾಜ್... ಮುತ್ತುರಾಜನ ಬಾಲ್ಯ, ಕಲ್ಲು, ಮುಳ್ಳುಗಳ ಹಾದಿಯಾಗಿತ್ತು, ಹೊಟ್ಟೆ ಹೊರೆಯಲು ನಾಟಕ ಕಂಪನಿಯಲ್ಲಿ ಕೆಲಸ. ಮಾಡುತ್ತಿದ್ದ ತಂದೆ ಪುಟ್ಟಸ್ವಾಮಯ್ಯನವರ, ಬವಣೆಯನ್ನು ಅರಿತು, ಮೂರನೆಯ ತರಗತಿಯಲ್ಲೇ, ಶಾಲೆಗೆ ವಿದಾಯ ಹೇಳಿದರು ರಾಜ್. ಸಂಕಟ, ಸಾಮಾಜಿಕ ಅಪಮಾನಗಳನ್ನು ಮೌನವಾಗೇ ಅನುಭವಿಸಿ, ಅರಗಿಸಿ ಅರಳಿ ನಿಂತ ಬ್ರಹ್ಮ ಕಮಲ ರಾಜ್ ಕುಮಾರ್. ಜಾತಿ ಮತ್ತು ವರ್ಗ ವ್ಯವಸ್ಥೆಯ ಕಬಂಧ ಬಾಹುಗಳ ಹಿಡಿತದಲ್ಲಿ ನಲುಗುತ್ತಿದ್ದ, ಸಾಮಾಜಿಕ ಸಂದರ್ಭದಲ್ಲಿ ಯಾವುದೇ ಪ್ರಬಲ ಜಾತಿಯ, ಶ್ರೀಮಂತಿಕೆಯ ಬೆಂಬಲ ವಿಲ್ಲದೇ, ಶಿಕ್ಷಣದ ಒತ್ತಾಸೆಯಿಲ್ಲದೆ ಕೇವಲ ಪ್ರತಿಭೆ, ಶ್ರಮದಿಂದ ಸಾಮಾಜಿಕ-ಆರ್ಥಿಕ, ಕರಾಳ ಕಟ್ಟಳೆಗಳನ್ನು ಮೀರಿ ಬೆಳೆದು ನಿಂತ ಅನನ್ಯ ಸಾಧಕ ಡಾ ರಾಜ್ ಕುಮಾರ್. ಒಪ್ಪೊತ್ತಿನ ಊಟಕ್ಕೂ ಕಷ್ಟ ಪಟ್ಟು, ಶ್ರಮದ, ಬೆವರಿನ ಮಹತ್ವ ಅರಿತು, ಮೊದಲು ಬೆವರಿನ ಮನುಷ್ಯನಾಗಿ ನಂತರ ★ಬಂಗಾರದ ಮನುಷ್ಯ★ ನಾದ ಯುಗ ಪುರುಷ ಡಾ ರಾಜ್ ಕುಮಾರ್.

ತಮ್ಮ ಚಿತ್ರಗಳ ಮೂಲಕ ಕರ್ನಾಟಕದ ಸಂಸ್ಕೃತಿ, ಪರಂಪರೆ, ಸಾಹಿತ್ಯ, ಕಲಾ ವೈಭವಕ್ಕೆ ರಾಷ್ಟ್ರ ಅಂತರರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ತಂದುಕೊಟ್ಟ ಪ್ರಾತಃ ಸ್ಮರಣೀಯರು ಡಾ ರಾಜ್ ಕುಮಾರ್. ಇಡೀ ಜಗತ್ತಿನಲ್ಲಿ ರಾಜ್ ರಷ್ಟು ವೈವಿಧ್ಯಮಯ ಪಾತ್ರಗಳನ್ನು, ಅಷ್ಟೇ ಸಮರ್ಥವಾಗಿ ನಿಭಾಯಿಸಿದ, ಗಾಯನದಲ್ಲೂ ಸೈ ಎನಿಸಿಕೊಂಡ ಕಲಾವಿದ ಮತ್ತೊಬ್ಬರಿಲ್ಲ. ಬೇಡರ ಕಣ್ಣಪ್ಪ ಚಿತ್ರದಿಂದ ನಾಯಕ ನಟನಾಗಿ ವೃತ್ತಿ ಜೀವನ ಆರಂಭಿಸಿದ ರಾಜ್ ದಾಖಲೆಯ ಇನ್ನೂರು ಚಿತ್ರಗಳಲ್ಲಿ, ಅಭಿನಯಿಸಿ,ಅತಿ ಹೆಚ್ಚು ಯಶಸ್ವಿ ಚಿತ್ರಗಳನ್ನು ಕೊಟ್ಟ ವರನಟ. ಚಲನಚಿತ್ರ ರಂಗವೆಂದರೆ, ಭೋಗ, ಹಣ, ಆಡಂಬರ ಎಂಬ ಜನಾಭಿಪ್ರಾಯದ ನಡುವೆ ಈ ರಂಗವನ್ನು ಸದ್ಭಾವನೆಯ, ಆಧ್ಯಾತ್ಮಿಕದ ಕ್ಷೇತ್ರವನ್ನಾಗಿ ಕಟ್ಟಿದ ಸಾಂಸ್ಕೃತಿಕ ರಾಯಭಾರಿ ಡಾ ರಾಜ್ ಕುಮಾರ್. ತಮ್ಮ ಚಿತ್ರಗಳ ಮೂಲಕ ಸಮಾಜದ ಓರೆ-ಕೋರೆಗಳನ್ನು ತಿದ್ದುವ, ಸಾಮಾಜಿಕ ಅನಿಷ್ಟಗಳು ವಿರುದ್ಧ ಹೋರಾಡುವ, ಕೌಟುಂಬಿಕ ಮೌಲ್ಯಗಳನ್ನು ಎತ್ತಿ ಹಿಡಿಯುವಲ್ಲಿ ಸಮಾಜದಲ್ಲಿ ಧನಾತ್ಮಕ ಪರಿವರ್ತನೆಗೆ ನಾಂದಿ ಹಾಡಿದ್ದು ವಿಶೇಷ. 1971 ರಲ್ಲಿ ತೆರೆ ಕಂಡ ★ಬಂಗಾರದ ಮನುಷ್ಯ★ ಚಲನಚಿತ್ರ ಚಿತ್ರಮಂದಿರದಲ್ಲಿ ಎರಡು ವರ್ಷಕ್ಕೂ ಹೆಚ್ಚು ದಿನಗಳು ಪ್ರದರ್ಶನ ಕಂಡು ದಾಖಲೆ ಬರೆಯಿತು. ರಾಜೀವಪ್ಪನ ಪಾತ್ರದಲ್ಲಿ ಅಮೋಘ ಅಭಿನಯ ನೀಡಿದ, ರಾಜ್ ಮಣ್ಣಿನ ಮಗನಾಗಿ ನೀಡಿದ ಸಂದೇಶ, ನಾನಾ ಕಾರಣಗಳಿಗಾಗಿ ನಗರಗಳಿಗೆ ವಲಸೆ ಹೋಗಿದ್ದ. ಗ್ರಾಮೀಣ ಯುವಕರು.. ಮತ್ತೆ ಹಳ್ಳಿಗಳತ್ತ, ಕೃಷಿಯತ್ತ ಒಲವು ತೋರುವ ಪರಿವರ್ತನೆಗೆ ಮುನ್ನುಡಿ ಬರೆಯಿತು.

ಕರ್ನಾಟಕಕ್ಕೆ ಡಾ ರಾಜ್ ಕುಮಾರ್ ಕೊಡುಗೆ ಏನು? ಎಂಬ ಕೆಲವು ಕುಹಕು ನುಡಿಗಳ ನಡುವೆ, ಎರಡು ತಲೆಮಾರು. ಕಳೆದರೂ ಅವರು, ಪೀಳಿಗೆಗಳನ್ನು ಪ್ರಭಾವಿಸುತ್ತಿರುವುದೇ, ಆಕರ್ಷಿಸುತ್ತಿರುವುದೇ ಆ ಅಪೂರ್ವ ನಟನ ಅನನ್ಯತೆಗೆ ಸಾಕ್ಷಿ. ಕನ್ನಡ ಭಾಷೆಯಿರುವ ತನಕ ರಾಜ್ ನಮ್ಮೊಂದಿಗಿರುತ್ತಾರೆ. ಅವರು ಅಮರಜೀವಿ. .. ನಾಡು ನುಡಿಗೆ ಸಂಕಷ್ಟ ಎದುರಾದಾಗ ಸದಾ ಬೆಂಬಲವಾಗಿ ನಿಲ್ಲುತ್ತಿದ್ದ ರಾಜ್, 1981 ರಲ್ಲಿ ಕನ್ನಡ ಭಾಷೆಗೆ ಅಗ್ರಸ್ಥಾನ ದೊರೆಯಬೇಕು ಎಂದು ಪಾಟೀಲ್ ಪುಟ್ಟಪ್ಪ, ಚಂಪಾ ಮುಂತಾದ ಕನ್ನಡ ಚಳವಳಿಗಾರರು ಆರಂಭಿಸಿದ ಗೋಕಾಕ್ ಚಳುವಳಿಗೆ ಬೆಂಬಲವಾಗಿ ನಿಂತರು, ರಾಜ್ಯಾದ್ಯಂತ ಪ್ರವಾಸ ಮಾಡಿ ಕನ್ನಡಿಗರಲ್ಲಿ ಜಾಗೃತಿ ಮೂಡಿಸುವ ಮೂಲಕ ಭಾಷಾ ಹೋರಾಟಕ್ಕೆ ಸಿಂಹಬಲ ತುಂಬಿದರು.



1961 ರಲ್ಲಿ ನೆರೆ ಸಂತ್ರಸ್ತರ ಪರಿಹಾರ ನಿಧಿಗೆ, ವಂತಿಗೆ ಸಂಗ್ರಹಿಸಿ ಕೊಟ್ಟು ಅವರ ನೆರವಿಗೆ ನಿಂತು ಮಾನವೀಯತೆ ಮೆರೆದರು. ಡಬ್ಬಿಂಗ್ ಹಾವಳಿಯಿಂದ ತತ್ತರಿಸಿದ್ದ, ಕನ್ನಡ ಚಿತ್ರರಂಗದ ಪರವಾಗಿ ಡಬ್ಬಿಂಗ್ ವಿರೋಧಿ ಹೋರಾಟಕ್ಕೆ ಶಕ್ತಿ ತುಂಬಿದರು. ಜಿಲ್ಲಾ ಕೇಂದ್ರಗಳಲ್ಲಿ ರಂಗ ಮಂದಿರ ನಿರ್ಮಾಣಕ್ಕೆ ರಸಮಂಜರಿ ಕಾರ್ಯಕ್ರಮಗಳನ್ನು ಉಚಿತವಾಗಿ ನೆಡೆಸಿಕೊಟ್ಟರು. ಇನ್ನು ವೈಯಕ್ತಿಕವಾಗಿ, ಸಂಕಷ್ಟದಲ್ಲಿದ್ದ ಕಲಾವಿದರು ತಂತ್ರಜ್ಞರಿಗೆ ಸಹಾಯ ಹಸ್ತ ಚಾಚುತ್ತಿದ್ದ ರಾಜ್, ಪ್ರಚಾರಕ್ಕೆ ಆಸ್ಪದ ಕೊಡುತ್ತಿರಲಿಲ್ಲ, ಬಲಗೈಯಿಂದ ನೀಡಿದ ದಾನ ಎಡಗೈ ಗೆ ತಿಳಿಯಬಾರದು ಎಂಬುದು ಅವರ ಸಿದ್ಧಾಂತವಾಗಿತ್ತು. ಮೈಸೂರಿನಲ್ಲಿ ಶ್ರೀಮತಿ ಪಾರ್ವತಮ್ಮನವರ ಒತ್ತಾಸೆಯಂತೆ ನಿರ್ಮಿಸಿದ ಶಕ್ತಿ ಧಾಮ, ಅಶಕ್ತ, ದೀನ ಮಹಿಳೆಯರ ಆಶ್ರಯತಾಣವಾಗಿ, ಅವರಿಗೆ ಸ್ವಾಭಿಮಾನಿ ಬದುಕು ಕಟ್ಟಿಕೊಳ್ಳಲು ನೆರವಾಗುತ್ತಿದೆ.

★ಒಂದು ಕಾಲಮಾನದ ಕನ್ನಡ ಬದುಕು ಹೇಗಿರಬೇಕು? ಎಂಬುದನ್ನು ತಮ್ಮ ಚಿತ್ರಗಳ ಮೂಲಕ ಕಲಿಸಿ ಕೊಟ್ಟು ಸಮಾಜದ ಒಗ್ಗಟ್ಟಿಗೆ, ಸ್ವಸ್ಥ ಸಮಾಜದ ನಿರ್ಮಾಣಕ್ಕೆ ಪ್ರೇರಣೆ ನೀಡಿದವರು ಡಾ ರಾಜ್ ಕುಮಾರ್★.

ಕೇಂದ್ರ ಸರ್ಕಾರದ ಪ್ರತಿಷ್ಠಿತ ಪದ್ಮಭೂಷಣ ಪ್ರಶಸ್ತಿ, ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ, ರಾಜ್ಯ ಸರ್ಕಾರದ ಕರ್ನಾಟಕ ರತ್ನ ಪ್ರಶಸ್ತಿ ಸೇರಿದಂತೆ ಡಾ ರಾಜ್ ಕುಮಾರ್ ಭಾಜನರಾದ ಪ್ರಶಸ್ತಿ, ಬಿರುದುಗಳು ಅಗಣಿತ.

ತಮಗಿದ್ದ ಜನಪ್ರಿಯತೆ, ಜನಬೆಂಬಲದಿಂದ ಮನಸ್ಸು ಮಾಡಿದ್ದರೆ, ರಾಜಕೀಯ ಕ್ಷೇತ್ರದಲ್ಲಿ ಉತ್ತುಂಗ ಸ್ಥಾನ ಪಡೆಯಬಹುದಾಗಿತ್ತು ಆದರೂ, ಕನ್ನಡಿಗರು ತಮ್ಮ ಹೃದಯದಲ್ಲಿ ನೀಡಿರುವ ಅಭಿಮಾನವೇ ಸಾಕು ಎಂದ ಸಂತ ಡಾ ರಾಜ್ ಕುಮಾರ್.

ಅವರು, ವ್ಯಕ್ತಿತ್ವದಲ್ಲಿ ಶಿಸ್ತು, ನೈತಿಕತೆ ಮೌಲ್ಯಗಳನ್ನು ಕಾಪಾಡಿಕೊಂಡು ಯುವಜನತೆಗೆ ಆದರ್ಶಪ್ರಾಯರಾದರು. ರಾಜ್ ಕುಮಾರ್ ಜನ್ಮಶತಮಾನೋತ್ಸವದ ಹೊಸ್ತಿಲಲ್ಲಿ, ಅರ್ಹವಾಗಿ ದೊರೆಯಬೇಕಾದ ★ಭಾರತ ರತ್ನ ಪ್ರಶಸ್ತಿ★ ಈ ಕಲಾ ತಪಸ್ವಿಗೆ ದೊರೆಯಲಿ ಎಂಬುದು ಏಳು ಕೋಟಿ ಕನ್ನಡಿಗರ ಒತ್ತಾಸೆ.

ಅವರ ಅಭಿನಯ.. ಅವರು ಕಟ್ಟಿಕೊಟ್ಟ ಮೌಲ್ಯಗಳು ಇಂದಿಗೂ ಕನ್ನಡಿಗರ ಹೃದಯದಲ್ಲಿ ಜೀವಂತವಾಗಿದ್ದು, ಕರ್ನಾಟಕದ ಅಸ್ಮಿತೆಯನ್ನು ಶಾಶ್ವತವಾಗಿ ಬೆಳಗಿಸುತ್ತಿವೆ...

**- ಮೈ.ನಾ.ಲೋಕೇಶ್,** ಮೈಸೂರು

## ಅಣ್ಣಾವ್ರ ಹುಟ್ಟುಹಬ್ಬದಂದು ಎಲ್ರ ಕಾಲೆಳಿಯತ್ತೆ ಕಾಲ ತೆರೆಗೆ

## ಇದು 90ರ ಕಾಲಘಟ್ಟದ ಕಥೆ ಹೊಂದಿರುವ ಚಿತ್ರ!




ಸುಜಯ್ ಶಾಸ್ತ್ರಿ ನಿರ್ದೇಶನದ, ಗೋಕುಲ ಎಂಟರ್ ಟೈನರ್ಸ್ ಲಾಂಛನದಲ್ಲಿ ಗೋವಿಂದರಾಜು ಅವರು ನಿರ್ಮಿಸಿರುವ ಚಿತ್ರ ಎಲ್ರ ಕಾಲೆಳಿಯತ್ತೆ ಕಾಲ. ಚಂದನ್ ಶೆಟ್ಟಿ ನಾಯಕನಾಗಿ ನಟಿಸಿರುವ ಮೊದಲ ಚಿತ್ರ ಇದು. ಬಹುನಿರೀಕ್ಷೆ ಹುಟ್ಟುಹಾಕಿರುವ ಎಲ್ರ ಕಾಲೆಳಿಯತ್ತೆ ಕಾಲ ಚಿತ್ರ ಅಣ್ಣಾವ್ರ ಹುಟ್ಟುಹಬ್ಬದಂದು..

**ಅಂದ್ರೆ ಏಪ್ರಿಲ್ 24 ರಂದು ತೆರೆಗೆ ಬರಲಿದೆ.**

**ಒಂದು ವಾರ ಪೋಸ್ಟ್ ಪೋನ್**

ಇಡೀ ಚಿತ್ರತಂಡದ ಸಹಕಾರದಿಂದ ನಮ್ಮ ಚಿತ್ರ ಚೆನ್ನಾಗಿ ಮೂಡಿಬಂದಿದೆ. ಏಪ್ರಿಲ್ 17ಕ್ಕೆ ಬಿಡುಗಡೆಯಾಗಬೇಕಾಗಿದ್ದ ನಮ್ಮ ಚಿತ್ರ ಕಾರಣಾಂತರಗಳಿಂದ ಒಂದು ವಾರ ತಡವಾಗಿ.. ಅಂದ್ರೆ ಏಪ್ರಿಲ್ 24 ರಂದು ಬಿಡುಗಡೆಯಾಗುತ್ತಿದೆ. ಚಿತ್ರ ಎಲ್ಲರಿಗೂ ಪ್ರಿಯವಾಗುವ ಭರವಸೆ ಇದೆ ಎಂದು ನಿರ್ದೇಶಕ ಸುಜಯ್ ಶಾಸ್ತ್ರಿ ಹೇಳಿದರು.


**ಸಂತಸ ಪಟ್ಟ ಚಂದನ್ ಶೆಟ್ಟಿ**


ನಮ್ಮ ಚಿತ್ರ ಒಂದು ವಾರ ತಡವಾಗಿ ಬಿಡುಗಡೆಯಾಗುತ್ತಿದೆ. ನಮ್ಮೆಲ್ಲರ ಆರಾಧ್ಯ ದೈವ ವರನಟ ಡಾ ರಾಜ್ ಕುಮಾರ್ ಅವರ ಹುಟ್ಟುಹಬ್ಬದ ದಿನ ಬಿಡುಗಡೆಯಾಗುತ್ತಿರುವುದು ಬಹಳ ಖುಷಿಯಾಗಿದೆ. ನಮ್ಮ ಚಿತ್ರಕ್ಕೆ ನಿಮ್ಮೆಲ್ಲರ ಪ್ರೋತ್ಸಾಹವಿರಲಿ ಎಂದರು ನಾಯಕ ಚಂದನ್ ಶೆಟ್ಟಿ.

**ಚಿತ್ರದಲ್ಲಿ ನಟಿಸಿದ್ದಾರೆ ತಾರಾ ಅನುರಾಧಾ**

ಈ ಚಿತ್ರದಲ್ಲಿ ನನ್ನದು ಗಮನಾರ್ಹ ಪಾತ್ರ ಇದೆ. ಸುಜಯ್ ಶಾಸ್ತ್ರಿ ಹಾಗೂ ರಾಜ್ ಗುರು ಹೊಸಕೋಟೆ ರಂಗಭೂಮಿಯಿಂದ ಪರಿಚಿತರು. ಚಂದನ್ ಶೆಟ್ಟಿ ಹಾಗೂ ಅವರು ತಂದೆ - ತಾಯಿ ಕೂಡ ಪರಿಚಯ. ಇನ್ನೂ, ಅರ್ಚನಾ ಕೊಟ್ಟಿಗೆ ನಾನು ಇಷ್ಟ ಪಡುವ ನಾಯಕಿ. ಒಂದೊಳ್ಳೆ ತಂಡ ಸೇರಿ ಉತ್ತಮ ಚಿತ್ರ ಮಾಡಿದ್ದಾರೆ. ಹಾಡುಗಳು ಚೆನ್ನಾಗಿವೆ. ಎಲ್ಲರೂ ಚಿತ್ರಮಂದಿರಗಳಲ್ಲೇ ಈ ಚಿತ್ರವನ್ನು ನೋಡುವ ಮೂಲಕ ಪ್ರೋತ್ಸಾಹ ನೀಡಿ ಎಂದರು ತಾರಾ ಅನುರಾಧಾ. ಎಲ್ರ ಕಾಲೆಳಿಯತ್ತೆ ಕಾಲ ಚಿತ್ರದಲ್ಲಿ ರಿಂದವ್ವ ಎಂಬ ಪಾತ್ರವನ್ನ ತಾರಾ ಅನುರಾಧಾ ನಿಭಾಯಿಸಿದ್ದಾರೆ. ತಾರಾ ನಿರ್ವಹಿಸಿರುವ ರಿಂದವ್ವ ಪಾತ್ರವನ್ನ ಶರೀಫ, ಕನಕರಿಗೆ ಹೋಲಿಸಬಹುದು. ಊರಿನಲ್ಲಿ ಜ್ಞಾನಿಯಂತೆ ಇರುವ ಪಾತ್ರ ತಾರಾ ಅವರದ್ದು.

ಅಂದ್ಹಾಗೆ, ಎಲ್ರ ಕಾಲೆಳಿಯತ್ತೆ ಕಾಲ ಚಿತ್ರದಲ್ಲಿ ಚಂದನ್ ಶೆಟ್ಟಿ, ಅರ್ಚನಾ ಕೊಟ್ಟಿಗೆ ಜೊತೆ ರಜನಿಕಾಂತ್, ಅನಂತ ಪದ್ಮನಾಭ, ಮಂಜು ಪಾವಗಡ ಸಹ ನಟಿಸಿದ್ದಾರೆ. ಸಿನಿಮಾಗೆ ಪ್ರವೀಣ್ - ಪ್ರದೀಪ್ ಸಂಗೀತ ನಿರ್ದೇಶನ ಹಾಗೂ ವಿಶ್ವಜಿತ್ ರಾವ್ ಛಾಯಾಗ್ರಹಣವಿದೆ. ಎಲ್ರ ಕಾಲೆಳಿಯತ್ತೆ ಕಾಲ ಚಿತ್ರಕ್ಕೆ ರಾಜ್ ಗುರು ಹೊಸಕೋಟೆ ಕಥೆ ಬರೆದಿದ್ದಾರೆ. ಕಾಲದ ಮಹತ್ವವನ್ನ ಈ ಚಿತ್ರ ಸಾರಲಿದೆ.



## ಬೆಂಗಳೂರು ಮಾಯಾ ಲೋಕದ ಮತ್ತೊಂದು ಮುಖ

ಹಳ್ಳಿ ಹುಡುಗ ರಾಮುಗೆ (ಧರ್ಮ) ಚಿಕ್ಕ ವಯಸ್ಸಿನಿಂದಲೂ ಸಿನಿಮಾ ನಟನಾಗುವ ಆಸೆ. ಊರಿನಲ್ಲಿಯೇ ಬೀದಿ ನಾಟಕಗಳನ್ನು ಮಾಡಿಕೊಂಡಿದ್ದ ರಾಮುಗೆ ಗೆಳತಿ ಭವ್ಯಾ (ಅನುಷಾ) ಬೆಂಗಳೂರಿಗೆ ಬಂದು ಆಡಿಷನ್ ನೀಡಲು ಹೇಳುತ್ತಾಳೆ. ಅವಳ ಮಾತಿನಂತೆ ಬೆಂಗಳೂರಿಗೆ ಬರುವ ರಾಮುಗೆ ಮೊದಲು ಸಿನಿಮಾದಲ್ಲಿ ಕೆಲಸ ಸಿಗುತ್ತಾದರೂ, ಅಲ್ಲಿಯೇ ಗಟ್ಟಿ ನೆಲೆಯೂರಲು ಆಗುವುದಿಲ್ಲ. ಬಳಿಕ ಡೆಲಿವರಿ ಬಾಯ್ ಆಗಿ ಕೆಲಸ ಮಾಡತೊಡಗುತ್ತಾನೆ. ಆ ಸಮಯದಲ್ಲಿ ಆತನಿಗೆ ಮಹಾನಗರಿ ಬೆಂಗಳೂರಿನ ಮತ್ತೊಂದು ಮುಖದ ದರ್ಶನವಾಗುವುದು. ಮಹಿಳೆಯರನ್ನು ಅಪಹರಿಸಿ ರಹಸ್ಯವಾಗಿ ವಿಡಿಯೋ ಮಾಡಿ ಹಣ ವಸೂಲಿ ಮಾಡುವ ಕರಾಳ ದಂಧೆಯ ಪರಿಚಯವಾಗುತ್ತದೆ. ಈ ದಂಧೆಯಿಂದ ಹಲವು ಹೆಣ್ಣು ಮಕ್ಕಳು ಜೀವ ಕಳೆದುಕೊಂಡಿರುತ್ತಾರೆ. ಈ ಪ್ರಕರಣದ ತನಿಖೆಗೆ ಇಳಿಯುವ ಪೊಲೀಸ್ ಅಧಿಕಾರಿ (ಶಶಿಕುಮಾರ್) ಮೊದಲು ರಾಮುನನ್ನೇ ಆರೋಪಿ ಎಂದು ಬಂಧಿಸುತ್ತಾರೆ. ಅದರ, ತನಿಖೆ ಮುಂದುವರಿದಂತೆ ಅದರ ಕಥೆಯೇ ಬೇರೆ ಇರುತ್ತದೆ. ಅದು ಏನೆಂದು ತಿಳಿಯಲು ಬೆಂಗಳೂರು ಇನ್ ನೋಡಬೇಕು.

ಅಪಹರಣ, ವ್ಯವಸ್ಥಿತ ಮಾಫಿಯಾ ಸೇರಿ ಇತರೆ ಕ್ರೈಮ್‌ಗಳ ಕುರಿತು ಹಲವು ಸಿನಿಮಾಗಳು ಬಂದಿವೆ. ಆ ಸಾಲಿಗೆ ಬೆಂಗಳೂರು ಇನ್ ಒಂದು ಸೇರ್ಪಡೆಯಷ್ಟೇ. ಕಾರ್ತಿಕ್ ಮೂರ್ತಿ ಸಿದ್ಧ ಮಾದರಿಯಲ್ಲಿ ಈ ಕಮರ್ಷಿಯಲ್ ಕಥೆ ನಿರೂಪಿಸಿದ್ದಾರೆ. ಇನ್ನೊಂದಿಷ್ಟು ಅಧ್ಯಯನ, ತಯಾರಿ ಬೇಕಿತ್ತು. ಮೊದಲರ್ಧ ರಾಮು ಕಥೆ ಹೇಳಿದರೆ, ದ್ವಿತೀಯಾರ್ಧದಲ್ಲಿ ಸೂರ್ಯನ ಕಥೆ ಹೇಳಿದ್ದಾರೆ. ಇಬ್ಬರ ಕಥೆಯನ್ನು ಜೋಡಿಸಲು ಇನ್ನೊಂದಿಷ್ಟು ಕೆಲಸ ಮಾಡಬೇಕಿತ್ತು. ಧರ್ಮ ಕೀರ್ತಿರಾಜ್ ಎರಡು ಶೇಡ್‌ಗಳಲ್ಲಿ ಕಾಣಿಸಿಕೊಂಡಿದ್ದು, ಗಮನ ಸೆಳೆಯುತ್ತಾರೆ. ಪತ್ರಕರ್ತೆಯಾಗಿ ಅನುಷಾ ರೈ ಮಿಂಚಿದ್ದು, ರಿಷಾ ಗೌಡ ಪಾತ್ರಕ್ಕೆ ಮಾತಿಗಿಂತ ಗ್ಲಾಮರ್ ಲುಕ್ ನೀಡಲಾಗಿದೆ. ಮಂಜು ಪಾವಗಡ, ಬಲ ರಾಜವಾಡಿ, ಶಶಿಕುಮಾರ್ ಕೊಟ್ಟ ಜವಾಬ್ದಾರಿಯನ್ನು ನಿರ್ವಹಿಸಿದ್ದಾರೆ.

## ಕೆಡಿ ದಿ ಡೆವಿಲ್: ರೆಟ್ರೋ ಲುಕ್, ಮೈಯೆಲ್ಲಾ ನೆತ್ತರು

ಕನ್ನಡ ಚಿತ್ರರಂಗದ ಬಹುನಿರೀಕ್ಷಿತ ಪ್ಯಾನ್ ಇಂಡಿಯಾ ಕೆಡಿ: ದಿ ಡೆವಿಲ್ ಚಿತ್ರದ ನಿರ್ಮಾಪಕರು ಎಪ್ರಿಲ್ 22ರ ಬುಧವಾರ ಸಂಜೆ ಟ್ರೇಲರ್ ಅನಾವರಣಗೊಳಿಸಿದ್ದಾರೆ. ಚಂದನವನದ ಬಹುಬೇಡಿಕೆ ತಾರೆ ಧ್ರುವ ಸರ್ಜಾ 1970ರ ದಶಕದ ಬೆಂಗಳೂರಿನ ಉಗ್ರ ಗ್ಯಾಂಗ್‌ಸ್ಟರ್ ಅವತಾರದಲ್ಲಿ ಕಾಣಿಸಿಕೊಂಡಿದ್ದು, ಟ್ರೇಲರ್ ತುಂಬೆಲ್ಲಾ ರಕ್ತಸಿಕ್ತ ದೃಶ್ಯಗಳೇ!.

ಪ್ರೇಮ್ ನಿರ್ದೇಶನದ ಈ ಆ್ಯಕ್ಷನ್ ಡ್ರಾಮಾವನ್ನು ಕನ್ನಡದ ಖ್ಯಾತ ಚಲನಚಿತ್ರ ನಿರ್ಮಾಣ ಸಂಸ್ಥೆ ಕೆವಿಎನ್ ಪ್ರೊಡಕ್ಷನ್ಸ್‌ನ ವೆಂಕಟ್ ಕೆ ನಾರಾಯಣ್ ಬಿಗ್ ಬಜೆಟ್‌ನಲ್ಲಿ ನಿರ್ಮಿಸಿದ್ದಾರೆ. ಈ ಬಹುನಿರೀಕ್ಷಿತ ಚಿತ್ರ ತನ್ನ ತಾರಾಬಳಗದ ಸಲುವಾಗಿಯೂ ದೊಡ್ಡ ಮಟ್ಟದಲ್ಲಿ ಗಮನ ಸೆಳೆದಿದೆ. ಹೌದು, ಧ್ರುವ ಸರ್ಜಾ ಮುಖ್ಯಭೂಮಿಕೆಯಲ್ಲಿ ನಟಿಸಿದ್ದರೆ, ಬಾಲಿವುಡ್‌ನ ಸಂಜಯ್ ದತ್, ಶಿಲ್ಪಾ ಶೆಟ್ಟಿ, ಜಿಶು ಸೇನ್‌ಗುಪ್ತಾ, ನೋರಾ ಫತೇಹಿ ಮತ್ತು ಕನ್ನಡ ಚಿತ್ರರಂಗದ ಖ್ಯಾತ ಕಲಾವಿದರಾದ ವಿ ರವಿಚಂದ್ರನ್, ರಮೇಶ್ ಅರವಿಂದ್, ರೀಷ್ಮಾ ನಾಣಯ್ಯ ಅಭಿನಯಿಸಿದ್ದಾರೆ.

ಕೆವಿಎನ್ ಪ್ರೊಡಕ್ಷನ್ಸ್ ತನ್ನ ಅಫೀಶಿಯಲ್ ಸೋಷಿಯಲ್ ಮೀಡಿಯಾ ಪೇಜ್‌ಗಳಲ್ಲಿ ನಟರನ್ನು ಒಳಗೊಂಡ ಚಿತ್ರದ ಆಕರ್ಷಕ ಪೋಸ್ಟರ್ ಅನ್ನು ಹಂಚಿಕೊಂಡಿದೆ. ಜೊತೆಗೆ, ಜಗತ್ತು ಸಿದ್ಧವಾಗಿದೆ! ಕಥೆ ಈಗ ತೆರೆದುಕೊಳ್ಳಲು ಪ್ರಾರಂಭಿಸುತ್ತದೆ!! ಕೆಡಿ ದಿ ಡೆವಿಲ್ ಟ್ರೇಲರ್ ಈಗ ಆನಂದ್ ಆಡಿಯೋ ಯೂಟ್ಯೂಬ್‌ನಲ್ಲಿ ಬಿಡುಗಡೆಯಾಗಿದೆ. ಎಪ್ರಿಲ್ 30, 2026ರಂದು ಚಿತ್ರಮಂದಿರಗಳಲ್ಲಿ ಸಿನಿಮಾ ಬಿಡುಗಡೆಯಾಗಲಿದೆ ಎಂದು ಬರೆದುಕೊಂಡಿದೆ.

ಕೆಡಿ: ದಿ ಡೆವಿಲ್ 1970ರ ದಶಕದ ಬೆಂಗಳೂರಿನ ಒಂದು ಕರಾಳ ಪ್ರಪಂಚದ ಒಂದು ಪ್ರಬಲ ನೋಟವನ್ನೊದಗಿಸಿದೆ. ಅಪರಾಧ, ಅವ್ಯವಸ್ಥೆ ಮತ್ತು ಭಯವನ್ನು ತೋರಿಸುವ ನಗರದ




■ **ಆ್ಯಕ್ಷನ್ ಅವತಾರದಲ್ಲಿ ಅಬ್ಬರಿಸಿದ ಧ್ರುವ ಸರ್ಜಾ, ಸಂಜಯ್ ದತ್!**

ಭಯಾನಕ ದೃಶ್ಯಗಳೊಂದಿಗೆ ಟ್ರೇಲರ್ ಪ್ರಾರಂಭವಾಗುತ್ತದೆ. ಧ್ರುವ ಸರ್ಜಾ ಅವರನ್ನು ಭೂಗತ ಲೋಕದಲ್ಲಿ ಏರುವ ಉಗ್ರ ಮತ್ತು ನಿರ್ಭೀತ ಗ್ಯಾಂಗ್‌ಸ್ಟರ್ ಕೆಡಿಯಾಗಿ ಪರಿಚಯಿಸಲಾಗಿದೆ.

2 ನಿಮಿಷ 47 ಸೆಕೆಂಡುಗಳ ಟ್ರೇಲರ್ ಹೊಡೆದಾಟ, ಸ್ಫೋಟ ಸೇರಿ ಹಲವು ರೂಪದಲ್ಲಿ ತೀವ್ರ ಆ್ಯಕ್ಷನ್ ದೃಶ್ಯಗಳನ್ನು ಒಳಗೊಂಡಿದೆ. ಸಂಜಯ್ ದತ್ ತಮ್ಮ ಪಾತ್ರದಲ್ಲಿ ಸಖತ್ ಕಮಾಂಡಿಂಗ್ ಆಗಿ, ಶಿಲ್ಪಾ ಶೆಟ್ಟಿ ತಮ್ಮ ಪಾತ್ರದಲ್ಲಿ ಶಕ್ತಿಶಾಲಿಯಾಗಿ ಕಾಣಿಸಿಕೊಂಡಿದ್ದಾರೆ. 70ರ ದಶಕದ ಉಡುಗೆ ಮತ್ತು ಪ್ರಾಪರ್ಟಿಗಳೊಂದಿಗೆ ಚಿತ್ರ ಹಳೇ ಕಾಲದ ಕಥೆಯನ್ನು ಹೇಳಲಿದೆ ಅನ್ನೋದು ಸ್ಪಷ್ಟವಾಗಿದೆ.

ಈ ಚಿತ್ರವು ಆ್ಯಕ್ಷನ್, ಡ್ರಾಮಾ ಮತ್ತು ಭಾವನೆಗಳ ಮಿಶ್ರಣವಾಗಿದ್ದು, ಅಪರಾಧ ಜಗತ್ತಿನಲ್ಲಿ ಕೆಡಿ ಪ್ರಯಾಣದ ಮೇಲೆ ಕೇಂದ್ರೀಕರಿಸುತ್ತದೆ. ನಿರ್ದೇಶಕ ಪ್ರೇಮ್ ದೊಡ್ಡ ಪಾತ್ರಗಳನ್ನು ಪ್ರಸ್ತುತಪಡಿಸಲು ಹೆಸರುವಾಸಿಯಾಗಿದ್ದಾರೆ ಮತ್ತು ಟ್ರೇಲರ್ ಅವರ ವಿಶಿಷ್ಟ ಶೈಲಿಯನ್ನು ಪ್ರತಿಬಿಂಬಿಸುತ್ತದೆ.

ಕೆಡಿ: ದಿ ಡೆವಿಲ್ ಈ ವರ್ಷದ ಕನ್ನಡ ಚಿತ್ರರಂಗದ ಅತಿದೊಡ್ಡ ಸಿನಿಮಾಗಳಲ್ಲಿ ಒಂದು. ಗೆಲ್ಲುವ ವಿಶ್ವಾಸವೂ ದೊಡ್ಡ ಮಟ್ಟದಲ್ಲಿದೆ. ಇದೇ ಎಪ್ರಿಲ್ 30, 2026ರಂದು ಚಿತ್ರಮಂದಿರಗಳಲ್ಲಿ ಅದ್ಧೂರಿಯಾಗಿ ಕನ್ನಡ ಸೇರಿ ಪ್ಯಾನ್ ಇಂಡಿಯಾ ಮಟ್ಟದಲ್ಲಿ ಬಿಡುಗಡೆ ಆಗಲಿದೆ.

ಕೆವಿಎನ್ ಸಂಸ್ಥೆಯ ಸಿನಿಮಾಗಳು ಸಮಸ್ಯೆಯಲ್ಲಿ ಸಿಲುಕಿರುವ ಹಿನ್ನೆಲೆ ಕೆಲ ದಿನಗಳ ಹಿಂದೆ ಆಪ್ತರ ಬಳಿ ವಿಚಾರಿಸಿದಾಗ, ಹೌದು, ಕೆ.ಡಿ: ದಿ ಡೆವಿಲ್ ಚಿತ್ರವನ್ನು ರಿವೈಸಿಂಗ್ ಕಮಿಟಿಗೆ ಕಳುಹಿಸಲಾಗಿದೆ. ಏನು ಮಾಡೋದಕ್ಕೆ ಆಗುತ್ತೆ. ಸೆನ್ಸಾರ್ ನಿಯಮವನ್ನು ಪಾಲಿಸಬೇಕಿದೆ. ಈ ತಿಂಗಳು ಅಂದುಕೊಂಡ ಡೇಟ್‌ನಲ್ಲಿಯೇ ಬಿಡುಗಡೆ ಮಾಡಲು ಪ್ರಯತ್ನಗಳು ನಡೆಯುತ್ತಿವೆ ಎಂದು ಈಟಿವಿ ಭಾರತದೊಂದಿಗೆ ತಿಳಿಸಿದ್ರು. ಹಾಡೊಂದು ವಿವಾದದಲ್ಲಿ ಸಿಲುಕಿದ್ದ ಹಿನ್ನೆಲೆ, ಸಿನಿಮಾ ವಿಳಂಬ ಎದುರಿಸಬಹುದೆಂಬ ಆತಂಕವಿತ್ತು. ಆದ್ರೆ, ಚಿತ್ರ ನಿಗದಿತ ದಿನಾಂಕ - ಎಪ್ರಿಲ್ 30ಕ್ಕೇನೆ ಚಿತ್ರಮಂದಿರ ಪ್ರವೇಶಿಸಲು ಸಜ್ಜಾಗಿದ್ದು, ಅಭಿಮಾನಿಗಳು ಕಾತರರಾಗಿದ್ದಾರೆ.

## ದಿಗಂತ್ ನಟನೆಯ ರುದ್ರ ಕಾಲ ಚಿತ್ರಕ್ಕೆ ಅದ್ಧೂರಿ ಮುಹೂರ್ತ



ನಟ ದಿಗಂತ್ ಮತ್ತು ಹೆಬಾ ಪಟೇಲ್ ನಟನೆಯ ರುದ್ರ, ಕಾಲ ಚಿತ್ರಕ್ಕೆ ಬಂಡೆ ಮಹಾಕಾಳಿ ದೇವಸ್ಥಾನದಲ್ಲಿ ಚಾಲನೆ ಸಿಕ್ಕಿದೆ. ಯೋಗರಾಜ್ ಭಟ್ ಶುಭ ಹಾರೈಸಿದ್ದಾರೆ.

ಸ್ಯಾಂಡಲ್‌ವುಡ್‌ನ ಜನಪ್ರಿಯ ನಟ ದಿಗಂತ್ ಅಭಿನಯದ ನೂತನ ಚಿತ್ರ ರುದ್ರಕಾಲ ಚಿತ್ರದ ಮುಹೂರ್ತ ಸಮಾರಂಭವು ಬುಧವಾರ ಬೆಳಗ್ಗೆ ಕೆಂಪೇಗೌಡ ನಗರದ ಪ್ರಸಿದ್ಧ ಬಂಡೆ ಮಹಾಕಾಳಿ ದೇವಸ್ಥಾನದಲ್ಲಿ ನೆರವೇರಿತು. ಚಿತ್ರದ ಮೊದಲ ಸನ್ನಿವೇಶಕ್ಕೆ ಖ್ಯಾತ ನಿರ್ದೇಶಕ ಯೋಗರಾಜ್ ಭಟ್ ಅವರು ಆರಂಭ ಫಲಕ ತೋರುವ ಮೂಲಕ ಚಿತ್ರೀಕರಣಕ್ಕೆ ಚಾಲನೆ ನೀಡಿದರೆ, ನಿರ್ದೇಶಕ ರಾಜ್ ಗುರು ಅವರು ಕ್ಯಾಮೆರಾ ಚಾಲನೆ ಮಾಡಿದರು.



ಈ ಸಂದರ್ಭದಲ್ಲಿ ಚಿತ್ರತಂಡಕ್ಕೆ ಶುಭ ಹಾರೈಸಿದ ನಿರ್ದೇಶಕ ದ್ವಯರು, ರುದ್ರಕಾಲ ಸಿನಿಮಾ ದೊಡ್ಡ ಮಟ್ಟದಲ್ಲಿ ಯಶಸ್ವಿಯಾಗಲಿ ಎಂದು ಹಾರೈಸಿದರು. ಮುಹೂರ್ತದ ಬಳಿಕ ನಡೆದ ಪತ್ರಿಕಾಗೋಷ್ಠಿಯಲ್ಲಿ ಚಿತ್ರತಂಡದ ಸದಸ್ಯರು ಸಿನಿಮಾದ ಕುರಿತು ಕುತೂಹಲಕಾರಿ ಮಾಹಿತಿಯನ್ನು ಹಂಚಿಕೊಂಡರು.

ನಿರ್ದೇಶಕ ಗೋಪಿ ಅವರು ಮಾತನಾಡಿ, ಇದು ತಮ್ಮ ನಿರ್ದೇಶನದ ನಾಲ್ಕನೇ ಚಿತ್ರವಾಗಿದ್ದು, ಈಗಾಗಲೇ ತೆಲುಗಿನಲ್ಲಿ ಎರಡು ಹಾಗೂ ಕನ್ನಡದಲ್ಲಿ ಒಂದು ಚಿತ್ರವನ್ನು ನಿರ್ದೇಶಿಸಿರುವುದಾಗಿ ತಿಳಿಸಿದರು. ರುದ್ರಕಾಲ ಚಿತ್ರವು ಕನ್ನಡ ಮತ್ತು ತೆಲುಗು ಎರಡೂ ಭಾಷೆಗಳಲ್ಲಿ ಏಕಕಾಲಕ್ಕೆ ನಿರ್ಮಾಣವಾಗುತ್ತಿದೆ. ಇದೊಂದು ಕ್ರೈಮ್ ಥ್ರಿಲ್ಲರ್ ಮತ್ತು ಕೌಟುಂಬಿಕ ಭಾವನೆಗಳ ಸಂಗಮದ ಕಥಾಹಂದರವನ್ನು ಹೊಂದಿದೆ. ವಿಶೇಷವೆಂದರೆ, ಇತ್ತೀಚೆಗಷ್ಟೇ ಸ್ಟಾರ್ ನಟಿ ಸಮಂತಾ ಈ ಚಿತ್ರದ ಶೀರ್ಷಿಕೆಯನ್ನು ಅನಾವರಣಗೊಳಿಸಿದ್ದರು. ನಿರ್ಮಾಪಕ ರಮೇಶ್ ನಾಯ್ಕ್ ಅವರೇ ಈ ಚಿತ್ರಕ್ಕೆ ಕಥೆ ಬರೆದಿದ್ದು, ಮೇ ತಿಂಗಳಲ್ಲಿ ಬೆಂಗಳೂರಿನ ಸುತ್ತಮುತ್ತ ಚಿತ್ರೀಕರಣ ಆರಂಭವಾಗಲಿದೆ ಎಂದು ಮಾಹಿತಿ ನೀಡಿದರು.

ನಾಯಕ ನಟ ದಿಂಗತ್ ಮಾತನಾಡಿ, ಈ ಚಿತ್ರದಲ್ಲಿ ತಾವು ಇದುವರೆಗೆ ಮಾಡಿರದ ವಿಭಿನ್ನವಾದ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿರುವುದಾಗಿ ತಿಳಿಸಿದರು. ಚಿತ್ರರಂಗದ ಇಂದಿನ ಸಂಕಷ್ಟದ ಪರಿಸ್ಥಿತಿಯಲ್ಲೂ ಧೈರ್ಯ ಮಾಡಿ ಈ ಪ್ರಾಜೆಕ್ಟ್ ಆರಂಭಿಸಿರುವ ನಿರ್ಮಾಪಕ ರಮೇಶ್ ನಾಯ್ಕ್ ಅವರಿಗೆ ಮೆಚ್ಚುಗೆ ಸೂಚಿಸಿದರು. ನಿರ್ದೇಶಕ ಗೋಪಿ ಅವರು ಕಥೆ ವಿವರಿಸಿದಾಗಲೇ ತಮಗೆ ಬಹಳ ಇಷ್ಟವಾಯಿತು ಎಂದು ದಿಗಂತ್ ಸಂತಸ ವ್ಯಕ್ತಪಡಿಸಿದರು. ಹತ್ತು ವರ್ಷಗಳ ಹಿಂದೆ ಅಧ್ಯಕ್ಷ ಚಿತ್ರದ ಮೂಲಕ ಕನ್ನಡಿಗರ ಮನಗೆದ್ದಿದ್ದ ನಟಿ ಹೆಬಾ ಪಟೇಲ್ ಈ ಚಿತ್ರದ ಮೂಲಕ ಮತ್ತೆ ಚಂದನವನಕ್ಕೆ ಮರಳಿದ್ದು, ಅಂದು ನೀಡಿದ ಪ್ರೋತ್ಸಾಹವನ್ನೇ ಪ್ರೇಕ್ಷಕರು ಇಂದೂ ನೀಡಬೇಕೆಂದು ಮನವಿ ಮಾಡಿದರು.

ಚಿತ್ರವನ್ನು ರಮೇಶ್ ನಾಯ್ಕ್ ನಿರ್ಮಿಸುತ್ತಿದ್ದು, ರಂಜಿತಾ ನವೀನ್ ಸಹ-ನಿರ್ಮಾಪಕರಾಗಿ ಜವಾಬ್ದಾರಿ ಹೊತ್ತಿದ್ದಾರೆ. ನಟಿ ವಂಶಿ, ಗೋವಿಂದೇ ಗೌಡ ಸೇರಿದಂತೆ ಹಲವು ಕಲಾವಿದರು ತಾರಾಬಳಗದಲ್ಲಿದ್ದಾರೆ. ತಾಂತ್ರಿಕ ವರ್ಗದಲ್ಲಿ ಕ್ರಿಸ್ಟೋಫರ್ ಜೋಸೆಫ್ ಛಾಯಾಗ್ರಹಣ, ರುದ್ರ ಮಾಸ್ಟರ್ ನೃತ್ಯ ನಿರ್ದೇಶನ ಹಾಗೂ ಚನ್ನಯ್ಯ ಅವರ ಸಾಹಸ ನಿರ್ದೇಶನ ಚಿತ್ರಕ್ಕಿದೆ. ಪತ್ರಿಕಾಗೋಷ್ಠಿಯಲ್ಲಿ ಕಾರ್ಯಕಾರಿ ನಿರ್ಮಾಪಕ ಶಿವರಾಜ್ ಸೇರಿದಂತೆ ಚಿತ್ರದ ಪ್ರಮುಖ ತಾಂತ್ರಿಕ ವರ್ಗದವರು ಉಪಸ್ಥಿತರಿದ್ದರು.

### ಪ್ರಮುಖ ಮುಖ್ಯಾಂಶಗಳು

- ಪರಶುರಾಮನ ಜಯಂತಿಗೆ ಮಹಾವತಾರ ಪರಶುರಾಮ ಸಿನಿಮಾ ಅನೌನ್ಸ್
- ಹೊಂಬಾಳೆ ಫಿಲಂಸ್ ಪ್ರಸ್ತುತಪಡಿಸುತ್ತಿರುವ ಚಿತ್ರ
- ಇನ್ನು ಬರಲಿವೆ ಸಿನಿಮ್ಯಾಟಿಕ್ ಯೂನಿವರ್ಸ್‌ನ ಐದು ಚಿತ್ರಗಳು




## ಪರಶುರಾಮನ ಮಹಾವತಾರ: ವಿಷ್ಣುವಿನ ಅವತಾರದ ಸಿನಿಮ್ಯಾಟಿಕ್ ಯೂನಿವರ್ಸ್‌ನ 2ನೇ ಚಿತ್ರ ಘೋಷಣೆ

ಕಳೆದ ವರ್ಷ ಹೊಂಬಾಳೆ ಫಿಲಂಸ್ ಸಂಸ್ಥೆಯು ವಿಷ್ಣುವಿನ ಮಹಾವತಾರದ ಸಿನಿಮ್ಯಾಟಿಕ್ ಯೂನಿವರ್ಸ್‌ನ ಒಟ್ಟು ಏಳು ಆ್ಯನಿಮೇಟೆಡ್ ಚಿತ್ರಗಳನ್ನು ಘೋಷಿಸಿತ್ತು. ಆ ಯೂನಿವರ್ಸ್‌ನ ಮೊದಲ ಚಿತ್ರ ಮಹಾವತಾರ ನರಸಿಂಹ ಕಳೆದ ಜು.25ಕ್ಕೆ ರಿಲೀಸ್ ಆಗಿ, ಬಾಕ್ಸಾಫೀಸ್‌ನಲ್ಲಿ ಸದ್ದು ಮಾಡಿತ್ತು. ಅಶ್ವಿನ್ ಕುಮಾರ್ ನಿರ್ದೇಶನದಲ್ಲಿ ಮೂಡಿಬಂದಿದ್ದ ಮಹಾವತಾರ ನರಸಿಂಹ ಚಿತ್ರವು ಸುಮಾರು 350 ಕೋಟಿ ಅಧಿಕ ಗಳಿಕೆ ಮಾಡಿತ್ತು. ಭಾರತೀಯ ಚಿತ್ರರಂಗದಲ್ಲಿ ಅತಿಹೆಚ್ಚು ಗಳಿಕೆ ಮಾಡಿದ ಆ್ಯನಿಮೇಟೆಡ್ ಚಿತ್ರ ಎಂಬ ಗರಿಗೆ ಇದು ಪಾತ್ರವಾಗಿತ್ತು. ಈ ಚಿತ್ರದ ಯಶಸ್ಸಿನ ಬೆನ್ನಲ್ಲೇ ಹೊಂಬಾಳೆ ಫಿಲಂ ವಿಷ್ಣುವಿನ ಮಹಾವತಾರ ಯೂನಿವರ್ಸ್‌ನ ಎರಡನೇ ಚಿತ್ರವಾದ ಮಹಾವತಾರ ಪರಶುರಾಮ ಅಧಿಕೃತವಾಗಿ ಘೋಷಿಸಿದೆ. ಭಾನುವಾರ ಪರಶುರಾಮ ಜಯಂತಿ ಹಿನ್ನೆಲೆಯಲ್ಲಿ ಸಿನಿಮಾವನ್ನು ಘೋಷಿಸಿ, ಫಸ್ಟ್ ಲುಕ್ ಪೋಸ್ಟರ್ ಜತೆಗೆ ವಿಡಿಯೋ ಗ್ಲಿಂಪ್ಸ್ ರಿಲೀಸ್ ಮಾಡಲಾಗಿದೆ. ರಣರಂಗದಲ್ಲಿ ಯೋಧನೊಬ್ಬ ಕೊಡಲಿ ಹಿಡಿದು ಗರ್ಜಿಸುತ್ತಿದ್ದಾನೆ. ಹಾಗೆಯೇ, ಗ್ಲಿಂಪ್ಸ್‌ನಲ್ಲಿ ಧರ್ಮಕ್ಕೆ ಕಂಟಕ ಎದುರಾದಾಗ ಭೂಮಿಯು ರಕ್ತಸಿಕ್ತವಾಗುತ್ತದೆ. ಆಗ ವಿಷ್ಣು ವಿವಿಧ ಅವತಾರ ಎತ್ತುತ್ತಾನೆ. ಮಹಾವಿಷ್ಣುವಿನ ಇಚ್ಛೆ, ಮಹಾದೇವನ ಕೋಪ ತಾಳಿ ಪರಶುರಾಮನ ಅವತಾರ ತಾಳುತ್ತಾನೆ ಎಂಬ ಸಾಲುಗಳನ್ನು ಕಾಣಬಹುದಾಗಿದೆ. ಈ ಚಿತ್ರದಲ್ಲಿ ಪರಶುರಾಮನ ಸಾಹಸ ಹಾಗೂ ಅವತಾರಗಳನ್ನು ಆ್ಯನಿಮೇಟೆಡ್ ರೂಪದಲ್ಲಿ ತೋರಿಸಲು ಚಿತ್ರತಂಡ ಮುಂದಾಗುತ್ತಿದೆ. ಈ ಚಿತ್ರಕ್ಕೂ ಅಶ್ವಿನ್ ಕುಮಾರ್ ನಿರ್ದೇಶನವಿರಲಿದೆ. ಸದ್ಯ ಚಿತ್ರದ ಕೆಲಸಗಳು ಆರಂಭಗೊಂಡಿವೆ. ಸಿನಿಮಾ ಘೋಷಣೆಯ ಜತೆಗೆ ರಿಲೀಸ್ ದಿನಾಂಕವನ್ನು ಕೂಡ ಚಿತ್ರತಂಡ ಅನೌನ್ಸ್ ಮಾಡಿದೆ. 2027ರ ಡಿಸೆಂಬರ್‌ಗೆ ಮಹಾವತಾರ ಪರಶುರಾಮ ತೆರೆ ಮೇಲೆ ಬರಲಿದೆ. ಕನ್ನಡ, ಹಿಂದಿ, ತೆಲುಗು, ಮಲಯಾಳಂ ಮತ್ತು ತಮಿಳಿನಲ್ಲಿ ಈ ಸಿನಿಮಾ ಮೂಡಿಬರಲಿದೆ.

**2037ರವರೆಗೆ ಬ್ಯಾಕ್ ಟು ಬ್ಯಾಕ್ ಚಿತ್ರಗಳು**

2025ರಿಂದ 2037ರವರೆಗೆ ವಿಷ್ಣು ಮಹಾವತಾರ ಯೂನಿವರ್ಸ್‌ನ ಏಳು ಆ್ಯನಿಮೇಟೆಡ್ ಚಿತ್ರಗಳು ಬರಲಿವೆ. ಮಹಾವತಾರ ನರಸಿಂಹ ಜು. 25ರಂದು ಬಿಡುಗಡೆಯಾಗಿತ್ತು. ಉಳಿದಂತೆ ಮಹಾವತಾರ ಪರಶುರಾಮ ಸದ್ಯ 2027ರ ಡಿಸೆಂಬರ್‌ನಲ್ಲಿ ತೆರೆಗೆ ಬರಲಿದೆ. ಇನ್ನು ಮಹಾವತಾರ ರಘುನಂದನ (2029), ಮಹಾವತಾರ ದ್ವಾರಕದೇಶ್(2031), ಮಹಾವತಾರ ಗೋಕುಲಾನಂದ (2033), ಮಹಾವತಾರ ಕಲ್ಕಿ ಭಾಗ -1 (2035), ಮಹಾವತಾರ ಕಲ್ಕಿ ಭಾಗ-2 (2037)ತೆರೆ ಮೇಲೆ ಮೂಡಿಬರಲಿವೆ. ಈ ಮೂಲಕ ಹೊಂಬಾಳೆ ಸಂಸ್ಥೆಯು ಜಾಗತಿಕವಾಗಿ ಮೈಲಿಗಲ್ಲು ಸಾಧಿಸಲು ಸಜ್ಜಾಗುತ್ತಿದೆ.

# ಬೀಳದ ಹದ ಮಳೆ; ಕಾಫಿ ಬೆಳೆಗಾರರಿಗೆ ಸಂಕಷ್ಟ

## ಬೆಳೆ ಉಳಿಸಿಕೊಳ್ಳಲು ಸ್ಪ್ರಿಂಕ್ಲರ್ ಮೊರೆ ಹೋದ ರೈತರು

• ಪ್ರಜೋದಯ ವರದಿ

**ಆಲೂರು:** ಮಳೆಗಾಲ ಪ್ರಾರಂಭವಾದ ಮಾರ್ಚ್ ಮೊದಲ ವಾರದಿಂದ ಈವರೆಗೆ ಕೇವಲ ಎರಡು-ಮೂರು ಬಾರಿ ಮಳೆಯಾದರೂ, ಹದ ಮಳೆಯಾಗದೆ ತಾಲ್ಲೂಕಿನ ಗಡಿ ಹಾಗೂ ಬಿಕ್ಕೋಡು ಹೋಬಳಿಗೆ ಹೊಂದಿಕೊಂಡಿರುವ ಹತ್ತಾರು ಗ್ರಾಮಗಳ ಕಾಫಿ ಬೆಳೆಗಾರರು ಕಂಗಾಲಾಗಿದ್ದಾರೆ.

ಕಾಫಿ ಬೆಳೆಗೆ ಪ್ರಾರಂಭದಲ್ಲಿ ಕನಿಷ್ಠ ಒಂದು ಇಂಚು ಮಳೆಯಾದರೆ ಒಂದು ವಾರದಲ್ಲಿ ಮೊಗ್ಗು ಅರಳಿ ಹೂ ಬಿಡಲು ಪ್ರಾರಂಭವಾಗುತ್ತದೆ. ಆ ಸಂದರ್ಭದಲ್ಲಿ ಕನಿಷ್ಠ ಮುಕ್ಕಾಲು ಇಂಚು ಮಳೆಯಾದರೆ ಗಿಡದಲ್ಲಿ ಹೂ ಸುಗಮವಾಗಿ ಕಾಳುಗಟ್ಟುತ್ತದೆ. ಆದರೆ ಹೊಳಲು, ಚಟ್ನಹಳ್ಳಿ, ಕೆಸಗೋಡು, ಹಿರಿವಾಟೆ, ಹೊಸಳ್ಳಿ ಸೇರಿದಂತೆ ಸುಮಾರು ಏಳೆಂಟು ಕಿ. ಮೀ. ಸುತ್ತಳತೆಯಲ್ಲಿ ಈವರೆಗೆ ಒಮ್ಮೆ 25 ಸೆಂಟ್, ಮತ್ತೊಮ್ಮೆ 30 ಸೆಂಟ್ ಇನ್ನೊಮ್ಮೆ 15 ಸೆಂಟ್ ಮಳೆಯನ್ನು ಹೊಂದಿದವರು ಸಿಕ್ಕಷ್ಟು ನೀರನ್ನು ಸ್ಪ್ರಿಂಕ್ಲರ್ ಮೂಲಕ ಗಿಡಗಳಿಗೆ ನೀರು ಸಿಂಪಡಿಸಿ ಅಲ್ಪಸ್ವಲ್ಪ ಬೆಳೆ ಉಳಿಸಿಕೊಂಡಿದ್ದಾರೆ. ಅವಕಾಶವಿದ್ದ ಬೆಳೆಗಾರರು ಸ್ಪ್ರಿಂಕ್ಲರ್ ಮೂಲಕ ನೀರು ಒದಗಿಸಿದ್ದಾರೆ. ಇಲ್ಲದವರು ಸಂಕಷ್ಟಕ್ಕೊಳಗಾಗಿದ್ದಾರೆ.



ಕೆರೆ, ಕೊಳವೆ ಬಾವಿ ಇದ್ದ ಬೆಳೆಗಾರರು ಪರ್ಯಾಯವಾಗಿ ತುಂತುರು ಹನಿ ನೀರಾವರಿ ಪದ್ಧತಿಯಲ್ಲಿ (ಸ್ಪ್ರಿಂಕ್ಲರ್) ನೀರು ಸಿಂಪಡಿಸಿದ್ದಾರೆ. ವಿದ್ಯುತ್ ಅಡಚಣೆಯಿಂದ ಡೀಸೆಲ್ ಇಂಜಿನ್ ಮೂಲಕ ನೀರು ಸಿಂಪಡಿಸಲು ಒಂದು ಎಕರೆಗೆ 10-15 ಸಾವಿರ ರೂ. ಖರ್ಚಾಗುತ್ತದೆ. ವಿದ್ಯುತ್ ಮೂಲಕವಾದರೆ ಅರ್ಧದಷ್ಟು ಖರ್ಚಾಗುತ್ತದೆ. ವಿದ್ಯುತ್ ಸಮರ್ಪಕವಾಗಿ ಇಲ್ಲದಿರುವ ಕಾರಣ ಬಹುತೇಕ ಬೆಳೆಗಾರರು ಡೀಸೆಲ್ ಇಂಜಿನ್ ಮೊರೆ ಹೋಗಿದ್ದಾರೆ. ಸ್ಪ್ರಿಂಕ್ಲರ್ ಮೂಲಕ ನೀರು ಒದಗಿಸಿದವರ ಕಾಫಿ ತೋಟದಲ್ಲಿ ಚೆನ್ನಾಗಿ

> 
>
> ಪ್ರತಿದಿನ ಸುಡು ಬಿಸಿಲು, ಮೋಡ ಕವಿದ ವಾತಾವರಣ ಇರುತ್ತದೆ. ಮಳೆಯಾಗುತ್ತಿಲ್ಲ. ಅಲ್ಪಸ್ವಲ್ಪ ಮಳೆಯಾಗಿರುವುದರಿಂದ ಕಾಫಿ ಗಿಡಗಳು ಹಳದಿ ಬಣ್ಣಕ್ಕೆ ತಿರುಗಿ ಭಸ್ಮವಾಗುವ ಸ್ಥಿತಿ ತಲೆದೋರಿದೆ. ಕಳೆದ ವರ್ಷದ ಬೆಳೆಗೆ ಉತ್ತಮ ಬೆಲೆ ಸಿಕ್ಕಿತು. ಆದರೆ ಈ ವರ್ಷ ಬೆಲೆ ಕಡಿಮೆಯಾಗಿರುವುದು ಒಂದೆಡೆಯಾದರೆ, ಗಿಡಗಳನ್ನು ಉಳಿಸಿಕೊಳ್ಳುವುದು ಕಷ್ಟವಾಗಿದೆ. ಕಾರ್ಮಿಕರ ಸಂಬಳ ದಿನದಿಂದ ದಿನಕ್ಕೆ ಹೆಚ್ಚುತ್ತಲಿರುವುದರಿಂದ ಬೆಳೆಗಾರರ ಸ್ಥಿತಿ ಅಧೋಗತಿಯಾಗಿದೆ.
>
> - ಯೋಗೇಶ್, ಕಾಫಿ ಬೆಳೆಗಾರರು, ಹೊಳಲು ಗ್ರಾಮ.

> 
>
> ಪ್ರಕೃತಿಯನ್ನು ನಾಶ ಮಾಡುತ್ತಿರುವುದರಿಂದ ದುಷ್ಪರಿಣಾಮಗಳನ್ನು ಎದುರಿಸಲೇಬೇಕು. ಇತ್ತೀಚಿನ ಹವಾಮಾನ ಇಲಾಖೆ ಮುನ್ಸೂಚನೆಯಂತೆ ಬಸವ ಜಯಂತಿ ಹಬ್ಬದ ನಂತರ ಮಳೆಯಾಗುವ ನಿರೀಕ್ಷೆಯಿದೆ.
>
> - ರಮೇಶಕುಮಾರ್, ಸಹಾಯಕ ನಿರ್ದೇಶಕರು, ಕೃಷಿ ಇಲಾಖೆ.

ಹೂ ಅರಳಿದೆ. ಚೆನ್ನಾಗಿ ಕಾಳು ಗಟ್ಟುತ್ತದೆಯಾದರೂ, ಮಳೆಯಾಗದೆ ವಿಪರೀತ ಬಿಸಿಲು ಬೀಳುತ್ತಿರುವುದರಿಂದ ಗಿಡಗಳು ಹದವಾಗಿ ಉಳಿಯುವ ಪರಿಸ್ಥಿತಿ ಕಡಿಮೆಯಾಗಿದೆ ಎನ್ನಬಹುದು.

ಸುಮಾರು ಹತ್ತಾರು ವರ್ಷಗಳಿಂದೀಚೆಗೆ ಸಕಾಲಕ್ಕೆ ಮಳೆಯಾಗದೆ, ಮಾಗಿ ಮಳೆಯಾಗುವುದು ಒಂದು ತಿಂಗಳು ನಿಧಾನವಾಗಿದೆ. ರೈತರು ಆ ಕಾಕ್ಕೆ ಹೊಂದಿಕೊಂಡರೂ ಕೃಷಿಗೆ ಸಕಾಲಕ್ಕೆ ಮಳೆಯಾಗದೆ ದಿನದಿಂದ ದಿನಕ್ಕೆ ತೊಂದರೆಗೀಡಾಗುತ್ತಿದ್ದಾರೆ.

ಒಂದೆಡೆ ಕೃಷಿ ಕಾರ್ಮಿಕರ ಅಭಾವ ಕಾಫಿ ಬೆಳೆಗಾರರಿಗೆ ಆತಂಕ ಉಂಟು ಮಾಡಿದೆ. ಗ್ಯಾರಂಟಿ ಯೋಜನೆ ಹೊಡೆತದಿಂದಾಗಿ ಸ್ಥಳೀಯ ಕಾರ್ಮಿಕರು ಕಾಫಿ ತೋಟದ ಕೆಲಸಕ್ಕೆ ಬರುತ್ತಿಲ್ಲ. ಹತ್ತಾರು ಕಿ.ಮೀ. ದೂರದಿಂದ ಹೊರ ರಾಜ್ಯದ ಕಾರ್ಮಿಕರನ್ನು ವಾಹನಗಳ ಮೂಲಕ ಕರೆತಂದು ಕೆಲಸ ಮಾಡಿಸಲಾಗುತ್ತಿದೆ. ಕಾರ್ಮಿಕರ ಸಂಬಳದ ಜೊತೆಗೆ ವಾಹನಗಳಿಗೆ ಬಾಡಿಗೆ ನೀಡಬೇಕಾದ ಪರಿಸ್ಥಿತಿ ಕೆಲ ವರ್ಷಗಳಿಂದ ಎಡತಾಕಿದೆ. ಮಳೆ ಮತ್ತು ಕೃಷಿ ಕಾರ್ಮಿಕರನ್ನೆ ನಂಬಿರುವ ಬಹುತೇಕ ಕಾಫಿ ಬೆಳೆಗಾರರು ಮಳೆ ಇಲ್ಲದೆ ಸೊರಗಿದ್ದಾರೆ.

---

# ಸಮೀಕ್ಷೆ ಪೂರ್ಣ: ಶಿಕ್ಷಕರಿಗೆ ಸನ್ಮಾನ

## ಐದೇ ದಿನದಲ್ಲಿ 150 ಕುಟುಂಬದ ಸಮೀಕ್ಷೆ



• ಪ್ರಜೋದಯ ವರದಿ

**ಬೇಲೂರು:** ರಾಜ್ಯ ಸರ್ಕಾರ ಕೈಗೊಂಡಿರುವ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯನ್ನು ಪಟ್ಟಣದಲ್ಲಿ ಕಡಿಮೆ ಅವಧಿಯಲ್ಲಿ ಸಮೀಕ್ಷಾ ಕಾರ್ಯವನ್ನು ಶೇ. 100ರಷ್ಟು ಪೂರ್ಣಗೊಳಿಸಿರುವ ಶಿಕ್ಷಕರಾದ ಹೆಚ್.ಆರ್. ಕಲ್ಲೇಶ್ವರ್, ಉಮೇಶ್ ವೈ., ಇಶರ್ಥ್ ಅವರುಗಳನ್ನು ಬೇಲೂರು ಪುರಸಭಾ ಮುಖ್ಯಾಧಿಕಾರಿ ಬಸವರಾಜ್ ಟಾಕಪ್ಪ ಶಿಗ್ಗಾವಿ ಹಾಗೂ ಸಿಬ್ಬಂದಿಗಳು ಸನ್ಮಾನಿಸಿ ಗೌರವಿಸಿದರು.

ಎಚ್ಎಮ್ಜಿಎಚ್‌ಪಿಸ್ ಚಿಕ್ಕಬೇಡಿಗೆರೆ ಶಾಲೆಯ ಶಿಕ್ಷಕ ಎಚ್. ಆರ್. ಕಲ್ಲೇಶ್ವರ ಹಾಗೂ ಎಸ್ಇಎಸ್ ಮಹಿಳಾ ಪ್ರೌಢಶಾಲೆ ಶಿಕ್ಷಕ ವೈ. ಉಮೇಶ್ ಮತ್ತು ಎಂ.ಡಿ.ಆರ್. ಎಸ್. ಬೇಲೂರು ಶಾಲೆಯ ಶಿಕ್ಷಕ ಇಶರ್ಥ್ ಅವರು ಪಟ್ಟಣದ 150 ಮನೆಗಳ ಸಮೀಕ್ಷೆಯನ್ನು ಐದೇ ದಿನದಲ್ಲಿ ಶೇ 100ರಷ್ಟು ಪೂರ್ಣಗೊಳಿಸಿದ್ದಾರೆ. ಆದ್ದರಿಂದ ಪುರಸಭೆಯಲ್ಲಿ ಶಿಕ್ಷಕರನ್ನ ಪೌರ ಸನ್ಮಾನ ನೀಡಿ ಗೌರವಿಸಲಾಗಿದೆ ಎಂದು ಹೇಳಿದರು.

---

# 20 ಜಿಲ್ಲೆಗಳಲ್ಲಿ ಗುಡುಗು ಸಹಿತ ಮಳೆ ಸಂಭವ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದಲ್ಲಿ ಬಿಸಿಲ ಧಗೆ ತಕ್ಕಮಟ್ಟಿಗೆ ಕಡಿಮೆ ಆಗುವ ಲಕ್ಷಣಗಳು ಇವೆ. ಅಂದರೆ ರಾಜ್ಯದಲ್ಲಿ ಮೈಸುಡುವ ಬಿಸಿಲ ಮಧ್ಯೆ ವಿವಿಧ ಜಿಲ್ಲೆಗಳಲ್ಲಿ ಮತ್ತೆ ಗುಡುಗು, ಮಿಂಚು ಮತ್ತು ಆಲಿಕಲ್ಲು ಸಹಿತ ಮಳೆ ಆಗಲಿದೆ. ಈ ಸಂಬಂಧ 5 ಜಿಲ್ಲೆಗಳಿಗೆ ಆರೆಂಜ್ ಅಲರ್ಟ್, 15 ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಎಚ್ಚರಿಕೆ ನೀಡಲಾಗಿದೆ.

ತಮಿಳುನಾಡು ಹಾಗೂ ಇನ್ನಿತರ ಭಾಗಗಳಲ್ಲಿ ಸಮುದ್ರ ಮೇಲ್ಮೈನಲ್ಲಿ ಉಂಟಾಗಿರುವ ವಾಯು ಚಂಡಮಾರುತ ಪರಿಚಲನೆ, ಇನ್ನಿತರ ಬದಲಾವಣೆಗಳ ಕಾರಣದಿಂದ ರಾಜ್ಯದಲ್ಲಿ ಮಳೆ ಸಕ್ರಿಯವಾಗಿದೆ. ಪೂರ್ವ ಮುಂಗಾರು ಮುಂದಿನ 5 ದಿನಗಳ ಪೈಕಿ ಮೊದಲ ಎರಡು ದಿನ ಇಂದು ಮತ್ತು ನಾಳೆ ಅಬ್ಬರಿಸಲಿದೆ.

ಏ.24ರಿಂದ ಮೂರು ದಿನಗಳ ಕಾಲ ಕರಾವಳಿ ಹಾಗೂ ಉತ್ತರ ಒಳನಾಡಿನ ಒಂದಷ್ಟು ಜಿಲ್ಲೆಗಳಲ್ಲಿ ಮಳೆ ಮುಂದುವರಿಯಲಿದೆ. ವಿಜಯಪುರ, ಬಾಗಲಕೋಟೆ, ಕಲಬುರಗಿ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಕೊಡಗು, ಹಾಸನ, ಶಿವಮೊಗ್ಗ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ನೀಡಲಾಗಿದೆ. ಈ ಮೂಲಕ ಬೇಸಿಗೆಯಲ್ಲೂ ಮಳೆ ಅಬ್ಬರ ಕಂಡು ಬರಲಿದೆ.



ರಾಜ್ಯದ ಉತ್ತರ ಒಳನಾಡಿನಲ್ಲಿ ಅತೀವ ಬಿಸಿಲಿನ ಶಾಖ, ತೀವ್ರ ಸೆಖೆ ಉಂಟಾಗಿತ್ತು. ಇದೀಗ ಇದೇ ಭಾಗದ ಕೆಲವು ಕಡೆಗಳಲ್ಲಿ ಪೂರ್ವ ಮುಂಗಾರು ಮಳೆ ಅಬ್ಬರಿಸಲಿದೆ. ಗಂಟೆಗೆ 40-50 ಕಿಲೋ ಮೀಟರ್ ವೇಗದಲ್ಲಿ ಗಾಳಿ, ಆಲಿಕಲ್ಲು ಮತ್ತು ಗುಡುಗು ಸಹಿತ ಜೋರು ಮಳೆ ಆಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಉತ್ತರ ಒಳನಾಡಿನ ಬೀದರ್, ಗದಗ, ಹಾವೇರಿ, ಕೊಪ್ಪಳ, ರಾಯಚೂರು ಮತ್ತು ಯಾದಗಿರಿ, ದಾವಣಗೆರೆ, ಬಳ್ಳಾರಿ ಮತ್ತು ವಿಜಯನಗರದ ಇನ್ನು ಕರಾವಳಿ ಭಾಗದ ಉಡುಪಿ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಮಲೆನಾಡಿನ ಹಾಸನ, ಕೊಡಗು, ಶಿವಮೊಗ್ಗ ಜಿಲ್ಲೆಗಳಲ್ಲಿ ಮುಂದಿನ 48 ಗಂಟೆಗಳ ಕಾಲ ಕೆಲವು ಸ್ಥಳಗಳಲ್ಲಿ ವ್ಯಾಪಕ ಮಳೆ ಆಗಲಿದೆ.

---

# ಹೊ.ನ.ಪುರಕ್ಕೆ ಉತ್ತಮ ಫಲಿತಾಂಶ

• ಪ್ರಜೋದಯ ವರದಿ



**ಹೊಳೆನರಸೀಪುರ:** ಎಸ್ಎಸ್ಎಲ್ಸಿ ಪರೀಕ್ಷೆಯಲ್ಲಿ ತಾಲ್ಲೂಕಿಗೆ ಶೇ.96.87 ರಷ್ಟು ಫಲಿತಾಂಶ ದೊರತಿದ್ದು, ಗ್ರೀನ್‌ವುಡ್ ಆಂಗ್ಲ ಖಾಸಗಿ ಶಾಲೆ ವಿದ್ಯಾರ್ಥಿನಿ ಎಸ್. ಛಾಯಾ 625 ಕ್ಕೆ 619 ಅಂಕ ಗಳಿಸಿ ತಾಲ್ಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ.

ತಾಲೂಕಿನ ತಟ್ಟೆಕೆರೆ ಸರ್ಕಾರಿ ಆದರ್ಶ ಪ್ರೌಢಶಾಲೆಯ ವಿದ್ಯಾರ್ಥಿಗಳಾದ ಪಿ.ಆರ್.ವೈಷ್ಣವಿ 617 ದ್ವಿತೀಯ, ದೀಕ್ಷಾ 615 ಮತ್ತು ಬಿ.ಜೆ.ಲೇಖನಾ 615 ಅಂಕ ಪಡೆದು ತೃತೀಯ ಸ್ಥಾನವನ್ನು ಇಬ್ಬರೂ ಸಮ ಅಂಕದೊಂದಿಗೆ ಹಂಚಿಕೊಂಡಿದ್ದಾರೆ.

ಕಳೆದ ಸಾಲಿನ ಎಸ್ಎಸ್ಎಲ್ಸಿ ಪರೀಕ್ಷೆ ಬರೆದಿದ್ದ 2079 ವಿದ್ಯಾರ್ಥಿಗಳಲ್ಲಿ 2014 ವಿದ್ಯಾರ್ಥಿಗಳು ಪಾಸ್ ಆಗಿದ್ದಾರೆ. ತಾಲ್ಲೂಕಿನ ಒಟ್ಟು 62 ಶಾಲೆಗಳಲ್ಲಿ 30 ಸರ್ಕಾರಿ, 7 ಖಾಸಗಿ ಶಾಲೆಗಳು ಶೇ.100 ರಷ್ಟು ಸಂಪೂರ್ಣ ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. ಈ ಬಗ್ಗೆ ಪೋಷಕರು ಸಂತಸ ವ್ಯಕ್ತಪಡಿಸಿದ್ದಾರೆ.

---

# ಎಸ್‌ಎಸ್‌ಎಲ್‌ಸಿ: ಜಿಲ್ಲೆಗೆ ಸಕಲೇಶಪುರ ತಾಲ್ಲೂಕು ಪ್ರಥಮ

• ಪ್ರಜೋದಯ ವರದಿ

**ಸಕಲೇಶಪುರ:** ಇತ್ತೀಚೆಗೆ ಪ್ರಕಟವಾದ ಎಸ್ಎಸ್ಎಲ್ಸಿ ಪರೀಕ್ಷಾ ಫಲಿತಾಂಶದಲ್ಲಿ ಸಕಲೇಶಪುರ ತಾಲ್ಲೂಕು ಶೇ. 99.25ರಷ್ಟು ಫಲಿತಾಂಶ ಪಡೆಯುವ ಮೂಲಕ ಹಾಸನ ಜಿಲ್ಲೆಯಲ್ಲಿಯೇ ಪ್ರಥಮ ಸ್ಥಾನ ಗಳಿಸಿ ಸಾಧನೆ ಮಾಡಿದೆ.

**ತಾಲ್ಲೂಕಿನ ಅಂಕಿ-ಅಂಶ:**


ತಾಲ್ಲೂಕಿನ ಒಟ್ಟು 42 ಪ್ರೌಢಶಾಲೆಗಳಿಂದ 1203 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದರು. ಇವರಲ್ಲಿ 1202 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 1194 ವಿದ್ಯಾರ್ಥಿ ಗಳು ಉತ್ತೀರ್ಣರಾಗಿದ್ದಾರೆ. ಕೇವಲ 8 ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದು, ತಾಲ್ಲೂಕಿನ ಯಾವುದೇ ಶಾಲೆಯೂ ಶೂನ್ಯ ಫಲಿತಾಂಶ ಪಡೆದಿಲ್ಲ ಎಂಬುದು ವಿಶೇಷ. ಪರೀಕ್ಷೆ ಬರೆದವರಲ್ಲಿ 49 ವಿದ್ಯಾರ್ಥಿಗಳು 600ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿ ಸಾಧನೆ ಮಾಡಿದ್ದಾರೆ.

**ನೂರಕ್ಕೆ ನೂರು ಫಲಿತಾಂಶ ಪಡೆದ ಶಾಲೆಗಳು:**

ತಾಲ್ಲೂಕಿನ ಒಟ್ಟು 42 ಶಾಲೆಗಳ ಪೈಕಿ 38 ಶಾಲೆಗಳು ಶೇ. 100ರಷ್ಟು ಫಲಿತಾಂಶ ದಾಖಲಿಸಿವೆ. ಇದರಲ್ಲಿ 18 ಸರ್ಕಾರಿ ಪ್ರೌಢಶಾಲೆಗಳ ಪೈಕಿ 17 ಶಾಲೆಗಳು, 8 ಅನುದಾನಿತ ಶಾಲೆಗಳಲ್ಲಿ 5 ಶಾಲೆಗಳು, 11 ಅನುದಾನ ರಹಿತ ಶಾಲೆಗಳ ಪೈಕಿ ಎಲ್ಲಾ 11 ಶಾಲೆಗಳು ಹಾಗೂ ಇತರೆ ಇಲಾಖೆಗಳ ಅಡಿಯಲ್ಲಿದ್ದ 5 ಶಾಲೆಗಳು ನೂರಕ್ಕೆ ನೂರು ಸಾಧನೆ ಮಾಡಿವೆ.

**ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು:**

ತಾಲ್ಲೂಕು ಮಟ್ಟದಲ್ಲಿ ಆಕ್ಸ್‌ಫರ್ಡ್ ಶಾಲೆಯ ಮಾನಸಿ ಹೆಚ್. ಎಸ್ (619 ಅಂಕ) ಪ್ರಥಮ ಸ್ಥಾನ ಪಡೆದರೆ, ರೋಟರಿ ಶಾಲೆಯ ನವಮಿ ಎಸ್.ಎಸ್ (618 ಅಂಕ) ದ್ವಿತೀಯ ಹಾಗೂ ಉದೇವಾರ ಸರ್ಕಾರಿ ಪ್ರೌಢಶಾಲೆಯ ಪ್ರಿಯ ಕೆ.ಎಂ. (616 ಅಂಕ) ತೃತೀಯ ಸ್ಥಾನ ಗಳಿಸಿದ್ದಾರೆ.




**ಸರ್ಕಾರಿ ಶಾಲೆಗಳ ಸಾಧನೆ:**

ಸರ್ಕಾರಿ ಶಾಲೆಗಳ ವಿಭಾಗದಲ್ಲಿ ಉದೇವಾರ ಸರ್ಕಾರಿ ಪ್ರೌಢಶಾಲೆಯ ಪ್ರಿಯ ಕೆ.ಎಂ (616 ಅಂಕ) ಪ್ರಥಮ ಸ್ಥಾನ ಗಳಿಸಿದ್ದಾರೆ. ಹೆತ್ತೂರು ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರನವ್ ಗೌಡ ಎಲ್.ಎಸ್ (612 ಅಂಕ) ದ್ವಿತೀಯ ಹಾಗೂ ಉದೇವಾರ ಸರ್ಕಾರಿ ಪ್ರೌಢಶಾಲೆಯ ಬಿಂದು ಯು.ಡಿ. (610 ಅಂಕ) ತೃತೀಯ ಸ್ಥಾನ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ ಎಂದು ಶಿಕ್ಷಣ ಇಲಾಖೆ ವತಿಯಿಂದ ಮಾಹಿತಿ ನೀಡಲಾಗಿದೆ.

ಜಿಲ್ಲಾ ಮಟ್ಟದಲ್ಲಿ ಪ್ರಥಮ ಸ್ಥಾನ ಗಳಿಸಿದ ಸಕಲೇಶಪುರ ತಾಲ್ಲೂಕಿನ ಈ ಸಾಧನೆಗೆ ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಶಿಕ್ಷಕ ವೃಂದ ಹಾಗೂ ಪೋಷಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

---

# ಅರಸೀಕೆರೆ: ಸರ್ಕಾರಿ ಶಾಲಾ ವಿದ್ಯಾರ್ಥಿಗಳ ಮೇಲುಗೈ

• ಪ್ರಜೋದಯ ವರದಿ

**ಅರಸೀಕೆರೆ:** ಎಸ್ಎಸ್ಎಲ್ಸಿ ಫಲಿತಾಂಶದಲ್ಲಿ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳು ಖಾಸಗಿ ಹಾಗು ಅನುದಾನಿತ ಶಾಲೆಗಳಿಗಿಂತ ಹೆಚ್ಚು ಅಂಕ ಗಳಿಸಿದ್ದಾರೆ.

ತಾಲ್ಲೂಕಿನ ಒಟ್ಟು ಫಲಿತಾಂಶ ಶೇ. 97.37 ದಾಖಲಾಗಿದ್ದು, 3351 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದು, 3263 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ತಾಲ್ಲೂಕಿನ ಅನೇಕ ಶಾಲೆಗಳು ಶೇ.100 ಫಲಿತಾಂಶ ದಾಖಲಿಸಿದ್ದು, ಜಿ.ಹೆಚ್.ಎಸ್. ನಾಗವೇದಿ, ಬೆಳಗುಂಬ, ಚಿಕ್ಕೂರು, ನೇರಲಿಗೆ, ತಳಲುತೊರೆ, ಬೆಲವತ್ತಳ್ಳಿ, ಕಲ್ಯಾಡಿ, ಬಾಳೆನಹಳ್ಳಿ, ಚೆಲ್ಲಾಪುರ, ಕರಗುಂದ, ಗಂಡಸಿ, ಬಂದೂರು, ಬಾಗೇಶಪುರ, ಕೆಂಕೆರೆ, ಕೆ.ಶಂಕರನಹಳ್ಳಿ, ಮೊಣಕತ್ತೂರು, ಜಗಚಗೆರೆ, ಮರುಂಡಿ, ಜೆ.ಜೆ.ಸಿ ಬಾಯ್ಸ್ ಅರಸೀಕೆರೆ, ಜೆ.ಜೆ.ಸಿ. ಗಂಡಸಿ ಸಂತ ವೈದಾನ, ಕೆ.ಪಿ.ಎಸ್. ಚಿಂದೆನಳ್ಳಿ ಗಡಿ, ಶ್ರೀ ಬಸವೇಶ್ವರ ಹೈಸ್ಕೂಲ್ ಮಾಡಾಳು, ಮಲ್ಲಿಕಾರ್ಜುನ ಹೈಸ್ಕೂಲ್ ಯಡವನಹಳ್ಳಿ, ಶ್ರೀ ವಿದ್ಯಾರಣ್ಯ ಹೈಸ್ಕೂಲ್ ಕಲ್ಲುಂಡಿ, ಶ್ರೀ ಶಂಭುಲಿಂಗೇಶ್ವರ ಸ್ಕೂಲ್ ಗಂಡಸಿ, ಶ್ರೀ ಮರುಳಸಿದ್ದೇಶ್ವರ ಹೈಸ್ಕೂಲ್ ಬೆಂಡೆಕೆರೆ, ಶ್ರೀ ಬಸವೇಶ್ವರ ಗ್ರಾಮಾಂತರ ಹೈಸ್ಕೂಲ್ ಅಣ್ಣಾಯಕನಹಳ್ಳಿ, ಸಿದ್ದೇಶ್ವರ ಹೈಸ್ಕೂಲ್ ದುಮ್ಮೇನಹಳ್ಳಿ, ಜೆ.ವಿ.ಪಿ ಹೈಸ್ಕೂಲ್ ಕಾಮಸಮುದ್ರ, ಸೆಂಟ್ ಜಾನ್ ಹೈಸ್ಕೂಲ್ ಗಂಡಸಿ, ಸೆಂಟ್ ತೆರೆಸಾಸ್ ಸ್ಕೂಲ್ ಕಸವನಹಳ್ಳಿ, ಅರವಿಂದ ಹೈಸ್ಕೂಲ್ ಡಿ.ಎಂ. ಕುರ್ಕೆ, ಎಸ್.ಎಂ.ಎಸ್ ಡಿ.ಎಮ್ ಕುರ್ಕೆ, ಪುಷ್ಪರವಿ ನ್ಯಾಷನಲ್ ಸ್ಕೂಲ್ ಗಂಡಸಿ, ಆಕಾಂಕ್ಷ ಹೈಸ್ಕೂಲ್ ದೊಣನಕಟ್ಟೆ, ಎಸ್.ಟಿ.ಜೆ ಹೈಸ್ಕೂಲ್ ಹಾರನಹಳ್ಳಿ, ಎಂ.ಎಂ.ಡಿ. ಆರ್.ಎಸ್ ರಂಗಾಪುರ ಕಾವಲು, ಕಿತ್ತೂರಾಣಿ ಚೆನ್ನಮ್ಮ ಶಾಲೆ ಚಿಕ್ಕಾರೆಹಳ್ಳಿ, ಇಂದಿರಾ ಗಾಂಧಿ ವಸತಿ ಶಾಲೆ ರಾಮೇನಹಳ್ಳಿ ಸೇರಿದಂತೆ ಹಲವು ಶಾಲೆಗಳು ಉತ್ತಮ ಸಾಧನೆ ಮಾಡಿವೆ.





ನಗರದಲ್ಲಿ ಶಾಂತಿನಿಕೇತನ ಪಬ್ಲಿಕ್ ಸ್ಕೂಲ್, ಎಸ್.ಟಿ.ಜೆ ಹೈಸ್ಕೂಲ್ ಅರಸೀಕೆರೆ, ಶ್ರೀ ಬಸವೇಶ್ವರ ಹೈಸ್ಕೂಲ್ ಕೋಡಿಮಠ ಹಾಗೂ ಚಂದ್ರಶೇಖರ ಭಾರತಿ ಹೈಸ್ಕೂಲ್ ಮಾಲೆಕಲ್ಲು ತಿರುಪತಿ ಕೂಡ ಶೇ.100 ಫಲಿತಾಂಶ ದಾಖಲಿಸಿವೆ.

ವೈಯಕ್ತಿಕ ಸಾಧನೆಯಲ್ಲಿ ಕಸವನಹಳ್ಳಿಯ ಸೆಂಟ್ ತೆರೆಸಾಸ್ ಹೈಸ್ಕೂಲ್‌ನ ವಿದ್ಯಾರ್ಥಿನಿ ಲಿಖಿತಾ.ಡಿ ಹಾಗು ಗಂಡಸಿಯ ಪುಷ್ಪಾ ರವಿ ನ್ಯಾಷನಲ್ ಸ್ಕೂಲ್ ಇಂಚರ.ಎಸ್ 621 ಅಂಕಗಳೊಂದಿಗೆ ತಾಲ್ಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಪುಷ್ಪರವಿ ನ್ಯಾಷನಲ್ ಹೈಸ್ಕೂಲ್ ಗಂಡಸಿಯ ಇಂಚರ.ಡಿ 620 ಅಂಕಗಳೊಂದಿಗೆ ದ್ವಿತೀಯ ಸ್ಥಾನ ಪಡೆದಿದ್ದಾರೆ.

ಆದಿಚುಂಚನಗಿರಿ ಶಾಲೆಯ ಶ್ರೇಯ ಜಿ.ಎಸ್. ತೃತೀಯ ಸ್ಥಾನ, ಶಾಂತಿನಿಕೇತನ ಹೈಸ್ಕೂಲ್ ಅರಸೀಕೆರೆಯ ಮೇಘನಾ ಟಿ.ಎಸ್. ನಾಲ್ಕನೇ ಸ್ಥಾನ ಹಾಗು ಶ್ರೀ ವಿದ್ಯಾಶಂಕರ ಹೈಸ್ಕೂಲ್ ಅರಸೀಕೆರೆಯ ನಯನ ಎಸ್.ಹೆಚ್ 617 ಅಂಕಗಳೊಂದಿಗೆ ಐದನೇ ಸ್ಥಾನ ಪಡೆದಿದ್ದಾರೆ.

---

# ಯುವನಿಧಿ ಯೋಜನೆಯ ಸ್ವಯಂ-ಘೋಷಣೆ

• ಪ್ರಜೋದಯ ವರದಿ

**ಹಾಸನ:** ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಯುವನಿಧಿ ಯೋಜನೆಯಲ್ಲಿ ನೋಂದಣೆಯಾದ ಅಭ್ಯರ್ಥಿಗಳು ಕಡ್ಡಾಯವಾಗಿ ಆಧಾರ ಸೀಡೆಡ್ ಬ್ಯಾಂಕ್ ಖಾತೆ ಹೊಂದಿರಬೇಕು.

ವೆಬ್ ಸೈಟ್ https://sevasindhugs.karnataka.gov.in ನಲ್ಲಿ ಅರ್ಜಿಗಳನ್ನು ಪರಿಶೀಲಿಸಿಕೊಂಡು, ಹಾಗೂ ಪರಿಶೀಲನೆಗೆ ಬಾಕಿ ಉಳಿದಿರುವ ಅಭ್ಯರ್ಥಿಗಳು ಮಾತ್ರ ಸೂಚಿಸಲ್ಪಟ್ಟ ಇಲಾಖೆಯ ಕಚೇರಿಗಳಿಗೆ ತಮ್ಮ ಎಲ್ಲ ಮೂಲ ಅಂಕಪಟ್ಟಿ ಹಾಗೂ ಇತರೆ ಪ್ರಮಾಣ ಪತ್ರಗಳೊಂದಿಗೆ ಖುದ್ದಾಗಿ ಭೇಟಿ ನೀಡಿ ಪರಿಶೀಲಿಸಿ ಶೀಘ್ರವಾಗಿ ದೃಢೀಕರಿಸಿಕೊಳ್ಳುವಂತೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಉದ್ಯೋಗಾಧಿಕಾರಿ ತಿಳಿಸಿದ್ದಾರೆ.

---

# ಕಠಿಣ ಪರಿಶ್ರಮದಿಂದ ಮಾತ್ರ ಸಾಧನೆ ಸಾಧ್ಯ

• ಪ್ರಜೋದಯ ವರದಿ

**ಹಾಸನ:** ಕಠಿಣ ಪರಿಶ್ರಮ ಮತ್ತು ಛಲದ ನಿರ್ಧಾರವಿದ್ದರೆ ಅಸಾಧ್ಯವಾದುದನ್ನು ಸಾಧಿಸಬಹುದು ಎಂಬುದನ್ನು ಭಗೀರಥರು ತೋರಿಸಿಕೊಟ್ಟಿದ್ದಾರೆ ಎಂದು ಸಾಹಿತಿ ಕೊಟ್ರೇಶ್ ಎಸ್. ಉಪ್ಪಾರ್ ಅವರು ತಿಳಿಸಿದ್ದಾರೆ.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಹಾಸನಾಂಬ ಕಲಾಕ್ಷೇತ್ರದಲ್ಲಿ ಗುರುವಾರ ಆಯೋಜಿಸಿದ್ದ ಶ್ರೀ ಭಗೀರಥ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಹಾ ಪರಿಶ್ರಮದಿಂದ ಸಾಧನೆ ಮಾಡಿದವರಿಗೆ ಭಗೀರಥ ಪ್ರಯತ್ನ ಎನ್ನುತ್ತಾರೆ ಇದು ಭಗೀರಥನ ಸಂಕಲ್ಪ ಮತ್ತು ಪರಿಶ್ರಮದ ಮಹತ್ವವನ್ನು ತೋರಿಸುತ್ತದೆ, ಭಗೀರಥ ಪ್ರಯತ್ನ ಎಂಬುದು ಮಹತ್ವವಾದ ಕಾರ್ಯವನ್ನು ಸಾಧಿಸಲು ಮಾಡಿದ ಅಪಾರ ಪರಿಶ್ರಮವನ್ನು ಗುರುತಿಸುತ್ತದೆ ಇದು ಭಗೀರಥ ಮಹರ್ಷಿಗಳ ಜೀವನದಿಂದ ಮಾನವ ಸಂಕುಲಕ್ಕೆ ಬಂದಂತಹ ಶಾಶ್ವತವಾದ ಸಂದೇಶವಾಗಿದೆ ಎಂದರು.



ಭೂಮಿಯ ಮೇಲೆ ಜನಿಸಿದ ಪ್ರತಿಯೊಬ್ಬ ವ್ಯಕ್ತಿಯೂ ಸಾಧನೆ ಮಾಡಬೇಕು ಎಂಬುದು ಭಗೀರಥ ಮಹರ್ಷಿಗಳ ಧ್ಯೇಯವಾಗಿತ್ತು ಎಂದರಲ್ಲದೆ, ಭಗೀರಥನು ಕೇವಲ ಪೌರಾಣಿಕ ವ್ಯಕ್ತಿಯಲ್ಲ, ತ್ಯಾಗದ ಪ್ರತೀಕ, ಭಗೀರಥ ಜಯಂತಿ ನಮಗೆ ನಿರಂತರ ಪ್ರಯತ್ನದ ಹಾದಿಯಲ್ಲಿ ನಡೆಯಲು ಸ್ಫೂರ್ತಿ ನೀಡುತ್ತದೆ. ಅವರ ತತ್ವಾದರ್ಶಗಳನ್ನು ಪಾಲಿಸುವುದು ನಿಜವಾದ ಜಯಂತಿ ಎಂದರು.

ಕನ್ನಡ ಮತ್ತು ಸಂಸ್ಕೃತ ಇಲಾಖೆ ಸಹಾಯಕ ನಿರ್ದೇಶಕ ಹೆಚ್.ಪಿ. ತಾರಾನಾಥ, ಮಹಾನಗರ ಪಾಲಿಕೆಯ ಮಾಜಿ ಮಹಾಪೌರ ಚಂದ್ರೇಗೌಡ, ಜಿಲ್ಲಾ ಉಪ್ಪಾರ ಸಂಘದ ಅಧ್ಯಕ್ಷ ಎಸ್.ಜೆ.ನೀಲಪ್ಪ ಹಾಗೂ ಹೇಮಂತ್ ಕೆ.ಆರ್., ಮೋಹನ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

---

# ಪಿಂಚಣಿ ಸಮಸ್ಯೆಗಳಿಗೆ ಪರಿಹಾರ ಒದಗಿಸಿ

• ಪ್ರಜೋದಯ ವರದಿ

**ಹಾಸನ:** ಪಿಂಚಣಿ ಹಣ ಎಲ್ಲ ತಿಂಗಳು ಸರಿಯಾಗಿ ದೊರಕಬೇಕು ಮತ್ತು ಪಿಂಚಣಿ ದೊರಕದೇ ಇರುವ ಜನರ ಸಮಸ್ಯೆಗಳಿಗೆ ಪರಿಹಾರ ನೀಡಬೇಕು ಹಾಗೂ ಪಿಂಚಣಿ ಪಾವತಿ ಹಂತವನ್ನು ತಿಳಿಸಿ ಕೊಡಬೇಕು ಎಂದು ಅಕೌಂಟೆಂಟ್ ಜನರಲ್ ರಾಜೀವ್ ಕುಮಾರ್ ಸಿಂಗ್ ಅವರು ತಿಳಿಸಿದ್ದಾರೆ

ಅಕೌಂಟೆಂಟ್ ಜನರಲ್ ಕಚೇರಿ ಬೆಂಗಳೂರು ಹಾಗೂ ಖಜಾನೆ ಇಲಾಖೆ, ಬೆಂಗಳೂರು ಇವರ ಸಹಯೋಗದಲ್ಲಿ ನಗರದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಪಿಂಚಣಿ ಅದಾಲತ್, ಸಾಮಾನ್ಯ ಭವಿಷ್ಯ ನಿಧಿ ಅದಾಲತ್ ಹಾಗೂ ಲೆಕ್ಕಪತ್ರ ಸಮಸ್ಯೆಗಳ ಕುರಿತು ಆಯೋಜಿಸಿದ್ದ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.



ಪ್ರತಿ ಜಿಲ್ಲೆಯ ಬ್ಯಾಂಕ್‌ಗಳು ಬದ್ಧತೆಯಿಂದ ಕೆಲಸ ಮಾಡುತ್ತಿವೆ ಹಾಗೂ ಎಲ್ಲಾ ಬ್ಯಾಂಕ್‌ಗಳ ವ್ಯವಸ್ಥಾಪಕರು ಒಳ್ಳೆಯ ಶೈಲಿಯಲ್ಲಿ ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದರಲ್ಲದೆ, ಜಿಲ್ಲೆಯ ಎಲ್ಲಾ ಬ್ಯಾಂಕ್‌ಗಳು ಪಿಂಚಣಿ ಸಮಸ್ಯೆಗಳನ್ನು ಬಗೆಹರಿಸಿದರೆ, ಖಜಾನೆ ಅಧಿಕಾರಿಗಳು ತಕ್ಷಣ ಹಣ ಪಾವತಿ ಮಾಡುತ್ತಾರೆ ಹಾಗೂ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ ಎಂದು ತಿಳಿಸಿದರು.

DAG (ಪೆನ್ಷನ್)ನ ಸಚಿನ್ ಕೃಷ್ಣ ಕೌಶಿಕ್, ಹಿರಿಯ ಲೆಕ್ಕಾಧಿಕಾರಿ ನಾಗಜ್ಯೋತಿ ಎಂ., ಸಹಾಯಕ ಲೆಕ್ಕಾಧಿಕಾರಿ ಶ್ರೀಕಾಂತ್, ಸಹಾಯಕ ಲೆಕ್ಕಾಧಿಕಾರಿ ಪುನೀತ್ ಕುಮಾರ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಜಿಲ್ಲಾ ಖಜಾನೆಯ ಉಪ ನಿರ್ದೇಶಕ ವಿಜಯೇಂದ್ರ ಹಾಗೂ ವಿವಿಧ ಬ್ಯಾಂಕ್ ಅಧಿಕಾರಿಗಳು ಹಾಜರಿದ್ದರು.


---

# ಎಸ್.ಎಸ್.ಎಲ್.ಸಿ: ಅರಕಲಗೂಡು ತಾಲ್ಲೂಕಿಗೆ ಶೇ.97.39 ಫಲಿತಾಂಶ

• ಪ್ರಜೋದಯ ವರದಿ

**ಅರಕಲಗೂಡು:** ಪ್ರಸ್ತುತ ಸಾಲಿನಲ್ಲಿ ತಾಲ್ಲೂಕು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅದ್ಭುತ ಯಶಸ್ಸನ್ನು ಸಾಧಿಸಿದ್ದು, ಶೇ.97.39 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಹೆಣ್ಣು ಮಕ್ಕಳು ಶೇ.98.67 ರಷ್ಟು ಉತ್ತೀರ್ಣತೆಯೊಂದಿಗೆ ಮುನ್ನಡೆ ಸಾಧಿಸಿದ್ದರೆ, ಗಂಡು ಮಕ್ಕಳು ಶೇ.96.06 ರಷ್ಟು ಉತ್ತೀರ್ಣತೆಯೊಂದಿಗೆ ತೇರ್ಗಡೆಯಾಗಿದ್ದಾರೆ.

ಈ ಪ್ರಭಾವಶಾಲಿ ಫಲಿತಾಂಶದಿಂದ ತಾಲೂಕು ಜಿಲ್ಲೆಯಲ್ಲಿ ನಾಲ್ಕನೇ ಸ್ಥಾನ ಗಳಿಸಿದೆ, ಕಳೆದ ವರ್ಷದ ಐದನೇ ಸ್ಥಾನದಿಂದ ಗಮನಾರ್ಹ ಚೇತರಿಕೆ ಕಂಡಿದೆ. ಒಟ್ಟು 2167 ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ, 1118 ವಿದ್ಯಾರ್ಥಿನಿಯರು ಮತ್ತು 1049 ವಿದ್ಯಾರ್ಥಿಗಳು ಯಶಸ್ವಿಯಾಗಿದ್ದಾರೆ.



ತಾಲೂಕಿನ ಕಬ್ಬಳಿಗೆರೆ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಸಹನ ಪ್ರಥಮ ಸ್ಥಾನ ಗಳಿಸಿದ್ದಾರೆ. 625ಕ್ಕೆ 622 ಅಂಕ ಗಳಿಸಿದ್ದಾರೆ, ಬಿಜಿಎಸ್ ಶಾಲೆಯ ಭವಿಷ 625ಕ್ಕೆ 619 ಅಂಕಪಡೆದು ದ್ವಿತೀಯ ಸ್ಥಾನ ಮತ್ತು ಕ್ರಿಸ್ತಜ್ಯೋತಿ ಶಾಲೆಯ ಲೇಖನಾ 625ಕ್ಕೆ 618 ಅಂಕ ಪಡೆದು ತೃತೀಯ ಸ್ಥಾನ ಪಡೆದು ತಾಲೂಕಿಗೆ ಕೀರ್ತಿ ತಂದಿದ್ದಾರೆ.

ತಾಲೂಕಿನಲ್ಲಿ ಒಟ್ಟು ಒಟ್ಟು 58 ಪ್ರೌಢಶಾಲೆಗಳಿದ್ದು, ಈ ಪೈಕಿ 34 ಶಾಲೆಗಳು ಶೇಕಡಾ 100ರಷ್ಟು ಫಲಿತಾಂಶ ಪಡೆದು ಉತ್ತಮ ಸಾಧನೆ ಮಾಡಿವೆ. ಸರಕಾರಿ ಪ್ರೌಢಶಾಲೆಗಳು- 18, ವಸತಿ ಶಾಲೆಗಳು-5, ಅನುದಾನಿತ-3 ಹಾಗೂ ಅನುದಾನ ರಹಿತ ಶಾಲೆಗಳು -8.

ಒಟ್ಟು ಫಲಿತಾಂಶ ಪ್ರಕಾರ, 199 ವಿದ್ಯಾರ್ಥಿಗಳು ಎ+ ಗ್ರೇಡ್ ಪಡೆದಿದ್ದು, 368 ವಿದ್ಯಾರ್ಥಿಗಳು ಎ ಗ್ರೇಡ್,ಬಿ+487,ಬಿ ಗ್ರೇಡ್ 472,ಸಿ + ಗ್ರೇಡ್ 367 ಹಾಗೂ ಸಿ ಗ್ರೇಡ್ 244ವಿದ್ಯಾರ್ಥಿಗಳು ಪಡೆದಿದ್ದಾರೆ.

ತಾಲೂಕಿನ ಹುಲಿಕಲ್, ದೊಡ್ಡಮಗ್ಗೆ, ಮೋಕಲಿ, ಹೆಚ್.ಕೊಂಗಳಲೆ, ಮಲ್ಲಿಪಟ್ಟಣ, ದೊಡ್ಡಬೆಮ್ಮತ್ತಿ, ಕತ್ತಿಮಲ್ಲೇನಹಳ್ಳಿ, ವಿಜಾಪುರ ಅರಣ್ಯ, ಯಲಗತ್ತವಳ್ಳಿ, ಎಬಿಎಂ ಹಳ್ಳಿ, ಬನ್ನೂರು, ಹಂಡ್ರಂಗಿ, ಹೆಬ್ಬಾಲೆ, ಗಂಜಲಗೂಡು, ಕಟ್ಟೇಪುರ, ಕಾಳೇನಹಳ್ಳಿ, ಕೆಪಿಎಸ್ ಬಸವಾಪಟ್ಟಣ, ಪಟ್ಟಣದ ಬಾಲಕಿಯರ ಪ್ರೌಢಶಾಲೆ ಮತ್ತು ಕೋಟೆ ಸರ್ಕಾರಿ ಪ್ರೌಢಶಾಲೆಗಳಿಗೆ ಶೇ.100ರಷ್ಟು, ಸರ್ಕಾರಿ ವಸತಿ ಶಾಲೆಗಳಾದ ಹೊನ್ನವಳ್ಳಿ, ಬರಗೂರು, ಅಂಬೇಡ್ಕರ್, ಮಲ್ಲಿಪಟ್ಟಣ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳು ಶೇ.100ರಷ್ಟು ಹಾಗೂ ಅನುದಾನಿತ ಶಾಲೆಗಳಾದ ಹೊನ್ನವಳ್ಳಿ ಹೇಮಾವತಿ, ಅಗ್ರಹಾರ ಆದರ್ಶ, ಬೈಚನಹಳ್ಳಿ ಗ್ರಾಮಾಂತರ ಶಾಲೆಗಳಿಗೆ ಶೇ.100 ಮತ್ತು ಅನುದಾನರಹಿತ ಶಾಲೆಗಳಾದ ಕ್ರಿಸ್ತಜ್ಯೋತಿ, ಜ್ಯೋತಿ ಆಂಗ್ಲ ಮಾಧ್ಯಮ ಶಾಲೆ, ವಿಸ್ಡಂ ವ್ಯಾಲಿ, ಬೇತಲ್ ಪಬ್ಲಿಕ್, ರಚನಾ ವಿದ್ಯಾಲಯ, ಕುವೆಂಪು ಶಾಲೆ, ದಿವ್ಯ ಜ್ಯೋತಿ, ಬಿಜಿಎಸ್ ಶಾಲೆಗಳು ಶೇ. 100ರಷ್ಟು ಫಲಿತಾಂಶ ಪಡೆದಿವೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ಪಿ. ನಾರಾಯಣ ಅವರು ತಿಳಿಸಿದರು.

---

## ಎಸ್.ಎಸ್.ಎಲ್.ಸಿ. ಫಲಿತಾಂಶದಲ್ಲಿ ಬೇಲೂರಿಗೆ 8ನೇ ಸ್ಥಾನ | ಕಳೆದ ಬಾರಿಗಿಂತ ಶೇ.14 ರಷ್ಟು ಹೆಚ್ಚಳ

# ಪೋಷಕರ ಬೆಂಬಲ, ಶಿಕ್ಷಕರ ಅವಿರತ ಶ್ರಮಕ್ಕೆ ಸಾಕ್ಷಿ

• ಪ್ರಜೋದಯ ವರದಿ

**ಬೇಲೂರು:** ಎಸ್ಎಸ್ಎಲ್ಸಿ ಪರೀಕ್ಷೆಯ ಫಲಿತಾಂಶ ಏಪ್ರಿಲ್ 23 ರಂದು ಪ್ರಕಟವಾಗಿದ್ದು, ಶಿಲ್ಪಕಲೆಗಳ ತವರು ಬೇಲೂರು ತಾಲ್ಲೂಕು ಶೇ 95.59 ರಷ್ಟು ಫಲಿತಾಂಶವನ್ನು ಪಡೆಯುವ ಮೂಲಕ ಹಾಸನ ಜಿಲ್ಲೆಯಲ್ಲಿ ಎಂಟನೇ ಸ್ಥಾನ ಪಡೆದಿದ್ದು, ಕಳೆದ ಬಾರಿ ಶೇ. 81 ರಷ್ಟು ಫಲಿತಾಂಶವನ್ನು ತಾಲ್ಲೂಕು ಪಡೆದಿತ್ತು. ಪ್ರಸಕ್ತ ವರ್ಷದ ಪರೀಕ್ಷೆಯಲ್ಲಿ ಶೇ. 14 ರಷ್ಟು ಫಲಿತಾಂಶ ಹೆಚ್ಚಳವಾಗಿರುವುದು ಸಂತಸ ತಂದಿದೆ. ಉತ್ತಮ ಫಲಿತಾಂಶ ಬರಲು ಶಾಸಕರ ಮಾರ್ಗದರ್ಶನ, ಪೋಷಕರ ಬೆಂಬಲ, ಶಿಕ್ಷಕರ ಅವಿರತ ಶ್ರಮಕ್ಕೆ ಸಾಕ್ಷಿಯಾಗಿದೆ ಎಂದು ಬೇಲೂರು ಕ್ಷೇತ್ರ ಶಿಕ್ಷಣಾಧಿಕಾರಿ ಭಾಗ್ಯಮ್ಮ ತಿಳಿಸಿದರು.

ಪತ್ರಿಕಾ ಹೇಳಿಕೆ ನೀಡಿರುವ ಅವರು, ತಾಲ್ಲೂಕಿನ ಒಟ್ಟು 56 ಪ್ರೌಢಶಾಲೆಗಳಲ್ಲಿ 2025-26 ಸಾಲಿನ ಎಸ್ಎಸ್ಎಲ್ಸಿ ಪರೀಕ್ಷೆಯನ್ನು 2052 ವಿದ್ಯಾರ್ಥಿಗಳು ಬರೆದಿದ್ದು, ಅದರಲ್ಲಿ 1961 ವಿದ್ಯಾರ್ಥಿಗಳು ಉತ್ತೀರ್ಣವಾಗಿದ್ದಾರೆ ಒಟ್ಟು ಶೇ 95.59 ಫಲಿತಾಂಶ ಹೊರಬಂದಿದೆ. ವಿಶೇಷವಾಗಿ ಕನ್ನಡ ಭಾಷೆಯಲ್ಲಿ 11, ಇಂಗ್ಲಿಷ್ ಭಾಷೆಯಲ್ಲಿ 14, ಹಿಂದಿ 15, ಗಣಿತ 6, ವಿಜ್ಞಾನ 1 ಮತ್ತು ಸಮಾಜ ವಿಜ್ಞಾನ 14 ವಿದ್ಯಾರ್ಥಿಗಳ 100 ಕ್ಕೆ 100 ಅಂಕಗಳನ್ನು ಪಡೆದಿದ್ದಾರೆ. ಒಟ್ಟು 56 ಪ್ರೌಢ ಶಾಲೆಗಳಲ್ಲಿ 31 ಶಾಲೆಗಳು ಶೇ 100 ರಷ್ಟು ಫಲಿತಾಂಶವನ್ನು ಪಡೆದಿರುವುದು ನಿಜಕ್ಕೂ ಖುಷಿ ತಂದಿದೆ ಎಂದಿದ್ದಾರೆ.



ತಾಲ್ಲೂಕಿನ ಹನುಮಿಡಿ, ಗೆಂಡೇಹಳ್ಳಿ, ಹಗರೆ, ರಾಜನಶಿರಿಯೂರು, ತಾರಿಮರ, ಹೆಬ್ಬಾಳು, ಅನುಘಟ್ಟ,ಬೇಲೂರು, ಬಿಕ್ಕೋಡು, ಗಬ್ಬಲಗೋಡು ಮತ್ತು ನೆರಲಕಟ್ಟೆಯ 11 ಸರ್ಕಾರಿ ಶಾಲೆಗಳು ಶೇ 100 ರಷ್ಟು ಫಲಿತಾಂಶ ಬಂದಿದೆ. ಇನ್ನು ಮೋರಾರ್ಜಿಶಾಲೆ ಬೇಲೂರು, ಅಲೆಮಾರಿ ಮೋರಾರ್ಜಿ ಶಾಲೆ ಹಳೇಬೀಡು, ಕಿತ್ತೂರು ರಾಣಿ ಚೆನ್ನಮ್ಮ ಶಾಲೆ ಹಳೇಬೀಡು, ಅಂಬೇಡ್ಕರ್ ವಸತಿ ಶಾಲೆ ಬಿಕ್ಕೋಡು ಒಟ್ಟು 4 ವಸತಿ ಶಾಲೆಗಳಲ್ಲಿ ಶೇ 100 ಫಲಿತಾಂಶ ಬಂದಿದೆ. ಹಾಗೇಯೇ ತೋಳಲು ವೈಡಿಎನ್ಎಂ, ಅರೇಹಳ್ಳಿ ಮಾನಸ ಶಾಲೆಗಳು ಶೇ. 100 ರಷ್ಟು ಫಲಿತಾಂಶ ಪಡೆದಿವೆ. ಅಲ್ಲದೆ ದಿವ್ಯ ಆಂಗ್ಲ ಮಾಧ್ಯಮ ಶಾಲೆ, ಪೂರ್ಣಪ್ರಜ್ಞಾ, ಮೌಂಟ್ ಪೋರ್ಡ್, ಮಲೆನಾಡು ಆಂಗ್ಲ ಮಾಧ್ಯಮ ಶಾಲೆ ಅರೇಹಳ್ಳಿ, ಸರ್ವೋಧಯ ಬೇಲೂರು, ಅನುಗ್ರಹ ಅರೇಹಳ್ಳಿ, ಯುನೈಟೆಡ್ ಶಾಲೆ, ಎಸ್ ಜಿಆರ್ ಹಳೇಬೀಡು, ಬೇಲೂರು ಪಬ್ಲಕ್ ಶಾಲೆ, ಜ್ಞಾನ ದೀವಿಗೆ ಹಗರೆ, ವಿವಿಪಿಎಸ್ ಬೇಲೂರು, ಹೀರಾ ಪಬ್ಲಿಕ್ ಶಾಲೆ ಅರೇಹಳ್ಳಿ ಹಾಗೂ ಹರ್ಷ ಕಲ್ಪತರು ಒಟ್ಟು 14 ಅನುದಾನ ರಹಿತ ಶಾಲೆಗಳು ಶೇ. 100 ರಷ್ಟು ಫಲಿತಾಂಶವನ್ನು ತಮ್ಮದಾಗಿಸಿಕೊಂಡಿದ್ದಾರೆ ಎಂದರು.

ಬೇಲೂರು ಪಟ್ಟಣದ ಎಸ್ .ಪಿ.ದವನ್‌ಗೌಡ (ಪೂರ್ಣಪ್ರಜ್ಞಾ) 625 ಕ್ಕೆ 621 ಅಂಕ ಪಡೆದು ಹಾಸನ ಜಿಲ್ಲೆಗೆ ತೃತೀಯ ಸ್ಥಾನಕ್ಕೆ ಭಾಜನವಾಗಿದ್ದಾನೆ. ಹಾಗೇಯೆ ಪಟ್ಟಣದ ಆಧಿತ್ಯಗೌಡ ವಿ. (ಸರ್ವೋದಯ) 625ಕ್ಕೆ 621, ಎಚ್.ಎಂ. ಸ್ಪೂರ್ತಿ (ಸರ್ವೋದಯ) 625ಕ್ಕೆ 620, ಹೀತಾ ಎಂ ತೇಲ್ಕರ್ (ಪೂರ್ಣಪ್ರಜ್ಞಾ) 625ಕ್ಕೆ 619, ಎಸ್.ಎಸ್.ಪೃಥ್ವಿನ್ (ಪೂರ್ಣಪ್ರಜ್ಞಾ) 625ಕ್ಕೆ 619, ತನ್ಮಯ (ಪೂರ್ಣಪ್ರಜ್ಞಾ) 625 ಕ್ಕೆ 619, ಅಧ್ಯ(ಪೂರ್ಣಪ್ರಜ್ಞಾ) 625ಕ್ಕೆ 616 ಪಡೆದಿದ್ದಾರೆ ಎಂದು ತಿಳಿಸಲಾಗಿದೆ.

> ### ಫಲಿತಾಂಶ ಖುಷಿ ತಂದಿದೆ: ಮುಂದಿನ ವರ್ಷ ಇನ್ನಷ್ಟು ನಿರೀಕ್ಷೆ
>
> ತಾಲ್ಲೂಕಿನ ಪ್ರಸ್ತುತ ಸಾಲಿನ ಎಸ್ಎಸ್ಎಲ್ಸಿ ಫಲಿತಾಂಶ ಏಪ್ರಿಲ್ 23 ರಂದು ಹೊರ ಬಂದಿದೆ. ನಮ್ಮ ತಾಲ್ಲೂಕು ಶೇ 95.59 ರಷ್ಟು ಫಲಿತಾಂಶ ಬಂದಿರುವುದು ತೃಪ್ತಿ ತಂದಿದೆ. ಕಳೆದ ಭಾರಿ ಶೇ 81 ರಷ್ಟು ಫಲಿತಾಂಶ ಬಂದಿತ್ತು, ಸದ್ಯ ಶೇ.14 ರಷ್ಟು ಫಲಿತಾಂಶ ಹೆಚ್ಚಾಗಿ ಬಂದಿರುವುದು ಖುಷಿ ನೀಡಿದೆ.
>
> ಬೇಲೂರು ತಾಲ್ಲೂಕು ಶೇ 100 ರಷ್ಟು ಫಲಿತಾಂಶ ಪಡೆಯಬೇಕು ಎಂಬ ಹಂಬಲದಿಂದ ನಾವು ವಿಡಿಯೋ ಕಾನ್ಫರೆನ್ಸ್ ಮತ್ತು ಶಾಲೆಗಳಿಗೆ ಭೇಟಿ, ಶಿಕ್ಷಕರ ಸಭೆ ಹಾಗೇಯೆ ಎಸ್ಎಸ್ಎಲ್ಸಿ ಪರೀಕ್ಷೆಗೆ ಪೂರಕವಾಗಿ ಅಗತ್ಯ ಕ್ರಮಗಳನ್ನು ಸೇರಿದಂತೆ ಅಧಿಕಾರಿಗಳಿಗೆ ಸೌಲಭ್ಯಗಳನ್ನು ನೀಡಲಾಗಿತ್ತು. ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ನಮ್ಮ ನೆಚ್ಚಿನ ಶಿಕ್ಷಕ ಸಮೂಹ ಅವಿರತ ಶ್ರಮ ವಿಶೇಷವಾಗಿ ಪೋಷಕರ ಬೆಂಬಲದಿಂದ ಬೇಲೂರು ತಾಲ್ಲೂಕು ಉತ್ತಮ ಫಲಿತಾಂಶಕ್ಕೆ ಸಾಕ್ಷಿಯಾಗಿದೆ.
>
> - ಹೆಚ್.ಕೆ.ಸುರೇಶ್, ಶಾಸಕರು, ಬೇಲೂರು.

---

# ಸಕಲೇಶಪುರ ತಾಲ್ಲೂಕಿಗೆ ಮಾನಸಿ ಮೊದಲು

## ಆಕ್ಸ್‌ಫರ್ಡ್ ಶಾಲೆಗೆ ಶೇ.100 ಫಲಿತಾಂಶ

• ಪ್ರಜೋದಯ ವರದಿ

**ಸಕಲೇಶಪುರ:** 202526ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷಾ ಫಲಿತಾಂಶದಲ್ಲಿ ಪಟ್ಟಣದ ಆಕ್ಸ್‌ಫರ್ಡ್ ಇಂಗ್ಲಿಷ್ ಶಾಲೆಯು ಶೇ.100 ಫಲಿತಾಂಶ ದಾಖಲಿಸಿ ಗಮನಾರ್ಹ ಸಾಧನೆ ಮಾಡಿದೆ.

ಶಾಲೆಯ ವಿದ್ಯಾರ್ಥಿನಿ ಕುಮಾರಿ ಮಾನಸಿ ಹೆಚ್.ಎಸ್. ಒಟ್ಟು 625 ಅಂಕಗಳಿಗೆ 619 (ಶೇ. 99.04) ಅಂಕಗಳನ್ನು ಪಡೆದು ಸಕಲೇಶಪುರ ತಾಲೂಕು ಮಟ್ಟದಲ್ಲಿ ಪ್ರಥಮ ಸ್ಥಾನ ಗಳಿಸಿ ಶಾಲೆಗೆ ಕೀರ್ತಿ ತಂದಿದ್ದಾಳೆ.

ಶಾಲೆಯ ತುಷಾರ್ (96.96%), ನಿಮಿತ್ ಎನ್.ಆರ್. (96.48%), ಆದೀಶ್ ಎಂ.ಎಂ. (96.16%), ಆಯಿಷಾ ಬಿ (96%), ತನುಶ್ರೀ ಎಸ್.ವಿ. (96%), ಜೈನ್ ಹಸನ್ (95.84%), ಉಮ್ಮೆ ಹನಿ (95.52%) ಹಾಗೂ ತಸ್ಮಿಯ ಖಾನಂ (95.36%) ಉತ್ತಮ ಅಂಕಗಳನ್ನು ಪಡೆದು ಶಾಲೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ.

**ಒಟ್ಟಾರೆ ಫಲಿತಾಂಶ:**



ಈ ವರ್ಷ ಶಾಲೆಯ ಒಟ್ಟು 6 ವಿದ್ಯಾರ್ಥಿಗಳು 600ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ. 27 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್‌ನಲ್ಲಿ ಹಾಗೂ 7 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈ ಮೂಲಕ ಶಾಲೆಯು ಸತತವಾಗಿ ಶೇ.100 ಫಲಿತಾಂಶವನ್ನು ಮುಂದುವರಿಸಿದೆ.

ವಿದ್ಯಾರ್ಥಿಗಳ ಈ ಸಾಧನೆಗೆ ಶಾಲೆಯ ಆಡಳಿತ ಮಂಡಳಿ, ಶಿಕ್ಷಕ ವೃಂದ ಮತ್ತು ಪೋಷಕರು ಸಂತೋಷ ವ್ಯಕ್ತಪಡಿಸಿದ್ದಾರೆ. ವಿದ್ಯಾರ್ಥಿಗಳ ಪರಿಶ್ರಮ ಹಾಗೂ ಶಿಕ್ಷಕರ ಸಮರ್ಪಿತ ಬೋಧನೆಯೇ ಈ ಯಶಸ್ಸಿನ ಹಿಂದಿನ ಮುಖ್ಯ ಕಾರಣ ಎಂದು ಶಾಲಾ ಆಡಳಿತ ಮಂಡಳಿ ಹರ್ಷ ವ್ಯಕ್ತಪಡಿಸಿದೆ.

## ಎಸ್‌ಎಸ್‌ಎಲ್‌ಸಿ ಫಲಿತಾಂಶ

| ಕ್ರ.ಸಂ | ಜಿಲ್ಲೆಯ ಹೆಸರು | ಶೇಕಡವಾರು |
|---|---|---|
| 1 | ದಕ್ಷಿಣ ಕನ್ನಡ | 98.40 |
| 2 | ಉಡುಪಿ | 98.18 |
| 3 | ಉತ್ತರ ಕನ್ನಡ | 98.09 |
| 4 | ಹಾಸನ | 97.51 |
| 5 | ಮಂಡ್ಯ | 97.45 |
| 6 | ಶಿರಸಿ | 97.21 |
| 7 | ಹಾವೇರಿ | 96.87 |
| 8 | ಕೊಡಗು | 96.68 |
| 9 | ಶಿವಮೊಗ್ಗಾ | 96.56 |
| 10 | ವಿಜಯನಗರ | 96.39 |
| 11 | ಬೆಂ.ಗ್ರಾಮಾಂತರ | 95.83 |
| 12 | ಧಾರವಾಡ | 95.59 |
| 13 | ಕೋಲಾರ | 95.50 |
| 14 | ಬಾಗಲಕೋಟೆ | 95.42 |
| 15 | ಬೆಂಗಳೂರು ಉತ್ತರ | 95.33 |
| 16 | ಗದಗ | 95.24 |
| 17 | ಚಿಕ್ಕಮಗಳೂರು | 94.99 |
| 18 | ಬೆಳಗಾವಿ | 94.75 |
| 19 | ದಾವಣಗೆರೆ | 94.64 |
| 20 | ಮೈಸೂರು | 94.45 |
| 21 | ರಾಯಚೂರು | 94.41 |
| 22 | ವಿಜಯಪುರ | 94.16 |
| 23 | ಚಿಕ್ಕೋಡಿ | 94.09 |
| 24 | ಬಳ್ಳಾರಿ | 93.35 |
| 25 | ಕೊಪ್ಪಳ | 93.10 |
| 26 | ರಾಮನಗರ | 92.83 |
| 27 | ಚಿತ್ರದುರ್ಗ | 92.25 |
| 28 | ಬೀದರ್ | 92.17 |
| 29 | ತುಮಕೂರು | 92.04 |
| 30 | ಚಾಮರಾಜನಗರ | 91.89 |
| 31 | ಯಾದಗಿರಿ | 91.89 |
| 32 | ಬೆಂಗಳೂರು ದಕ್ಷಿಣ | 91.64 |
| 33 | ಚಿಕ್ಕಬಳ್ಳಾಪುರ | 90.88 |
| 34 | ಮಧುಗಿರಿ | 90.24 |
| 35 | ಕಲಬುರಗಿ | 85.06 |
| | ಕರ್ನಾಟಕ ರಾಜ್ಯದ ಒಟ್ಟು ಸರಾಸರಿ 94.1 | |



**ಆಮ್ ಆದ್ಮಿ ಪಕ್ಷದ ರಾಷ್ಟ್ರೀಯ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರು ಏ.26 ಮತ್ತು 27 ರಂದು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪರ ಪ್ರಚಾರ ನಡೆಸಲಿದ್ದಾರೆಂದು ಪಕ್ಷದ ಮೂಲಗಳು ಗುರುವಾರ ತಿಳಿಸಿವೆ.**

# ಪಕ್ಷ ವಿರೋಧಿ ಚಟುವಟಿಕೆ ಮಾಡಿದ್ದರೆ ಕ್ರಮ ಜರುಗಿಸಲಿ

## ಸಚಿವ ಜಮೀರ್ ಅಹ್ಮದ್ ಪ್ರತಿಕ್ರಿಯೆ | ಮುಸ್ಲಿಂ ನಾಯಕರ ತಲೆದಂಡಕ್ಕೆ ಅಸಮಾಧಾನ

• ಪ್ರಜೋದಯ ವರದಿ

**ಬೆಂಗಳೂರು:** ನಾನು ಕಾಂಗ್ರೆಸ್ ಪಕ್ಷದ ವಿರುದ್ಧ ಚಟುವಟಿಕೆ ಮಾಡಿದರೆ ಕ್ರಮ ಕೈಗೊಳ್ಳಲಿ ಎಂದು ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಅವರು ಸವಾಲೆಸೆದಿದ್ದಾರೆ.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದಲ್ಲಿ ನನ್ನನ್ನು ಯಾರೂ ಟಾರ್ಗೆಟ್ ಮಾಡಿಲ್ಲವೆಂದು ಸ್ಪಷ್ಟಪಡಿಸಿದರು. ನಾನು ನಾಯಕ ಅಲ್ಲ, ಜನ ಸೇವಕ ಅಷ್ಟೇ. ಪಕ್ಷದಲ್ಲಿ ಆರೋಪ ಮಾಡಿದವರು ಯಾರೂ ನನ್ನ ಹೆಸರು ಹೇಳಿಲ್ಲ. ಧರ್ಮ ಗುರುಗಳು ಹೇಳಿದ್ದನ್ನು ನೀವು ಅವರ ಬಳಿಯೇ ಕೇಳಬೇಕು. ಯಾರೂ ನನ್ನ ಹೆಸರನ್ನು ಹೇಳಲಿಲ್ಲವೆಂದರು.

ಧರ್ಮ ಗುರುಗಳ ಜೊತೆಗೆ ನಾನು ಮಾತಾಡಿ ಬಗೆಹರಿಸುತ್ತೇನೆ. ಶುಕ್ರವಾರ ನಮಾಜ್ ಬಳಿಕ ಕುಳಿತು ಚರ್ಚೆ ಮಾಡುತ್ತೇನೆ. ರಿಜ್ವಾನ್ ಅರ್ಷದ್, ಎನ್.ಎ.ಹ್ಯಾರಿಸ್, ಸಲೀಂ ಅಹಮದ್ ಕೂಡ ಫೋನ್ ಮಾಡಿ ಮಾತಾಡಿದ್ದಾರೆ. ಧರ್ಮ ಗುರುಗಳಿಗೆ ಬೇಸರ ಆಗಿರುವುದು ನಿಜ. ದಾವಣಗೆರೆ ಟಿಕೆಟ್ ಕೊಟ್ಟಿಲ್ಲ ಎಂದು ಸಮುದಾಯಕ್ಕೆ ಬೇಸರ ಆಗಿದೆ ಎಂದು ಹೇಳಿದರು.

ಸಾರ್ವತ್ರಿಕ ಚುನಾವಣೆಯಲ್ಲಿ ಮುಸ್ಲಿಂ ಸಮುದಾಯಕ್ಕೆ ಟಿಕೆಟ್ ಕೊಡುವ ಕುರಿತು ಹೈಕಮಾಂಡ್ ಹೇಳಿದೆ. ಒಂದು ವೇಳೆ ಪಕ್ಷದ ವಿರೋಧಿ ಚಟುವಟಿಕೆಯನ್ನು ಯಾರಾದರೂ ಮಾಡಿದರೆ ಅವರ ವಿರುದ್ಧ ಕ್ರಮ ಕೈಗೊಳ್ಳಲು



ರೀತಿ ನೀತಿಗಳಿವೆ. ಮೊದಲು ನೋಟೀಸ್ ನೀಡಬೇಕು. ಆ ಮೇಲೆ ಕ್ರಮ ಆಗಬೇಕು ಎಂದು ಆಪ್ತರಾದ ನಸೀರ್ ಅಹ್ಮದ್ ಮತ್ತು ಅಬ್ದುಲ್ ಜಬ್ಬಾರ್ ವಿರುದ್ಧದ ಕ್ರಮಕ್ಕೆ ವಿರೋಧ ವ್ಯಕ್ತಪಡಿಸಿದರು.

ಪಕ್ಷಕ್ಕಿಂತ ದೊಡ್ಡವರು ಯಾರೂ ಇಲ್ಲ, ಜಮೀರ್ ಖಾನ್ ಕೂಡ ಪಕ್ಷಕ್ಕಿಂತ ದೊಡ್ಡವನಲ್ಲ. ಒಂದು ವೇಳೆ ಮುಂದಿನ ದಿನಗಳಲ್ಲಿ ನಾನೂ ಪಕ್ಷ ವಿರೋಧಿ ಕೆಲಸ ಮಾಡಿದರೆ ನನಗೂ ಶಿಸ್ತು ಕ್ರಮ ಆಗಬೇಕು ಎಂದರು.

**ಸತೀಶ್ ಜಾರಕಿಹೊಳಿ ಜೊತೆ ಮಾತುಕತೆ**

ಇದೇ ಸಂದರ್ಭದಲ್ಲಿ ಜಮೀರ್ ಅಹ್ಮದ್ ಖಾನ್ ಅವರು ಸಚಿವ ಸತೀಶ್ ಜಾರಕಿಹೊಳಿ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು. ರಾಜ್ಯ ರಾಜಕೀಯದಲ್ಲಿ ನಡೆಯುತ್ತಿರುವ ಬೆಳವಣಿಗೆಗಳ ಹಿನ್ನಲೆಯಲ್ಲಿ ಈ ಭೇಟಿ ಮಹತ್ವ ಪಡೆದುಕೊಂಡಿದೆ.

ಈ ಹಿಂದೆಯೂ ಜಮೀರ್ ಮತ್ತು ಸತೀಶ್ ಜಾರಕಿಹೊಳಿ ಭೇಟಿ ನಡೆದಿತ್ತು. ಕೆಲವು ವಿಚಾರಗಳ ಬಗ್ಗೆ ಚರ್ಚೆ ನಡೆಸಿದ್ದರು. ಇದೀಗ ದಾವಣಗೆರೆ ಟಿಕೆಟ್ ವಿಚಾರವಾಗಿ ನಡೆಯುತ್ತಿರುವ ಬೆಳವಣಿಗೆಗಳ ಹಿನ್ನಲೆಯಲ್ಲಿ ಈ ಭೇಟಿ ಮಹತ್ವ ಪಡೆದುಕೊಂಡಿದೆ. ಅದರಲ್ಲೂ ಮುಸ್ಲಿಂ ಸಮುದಾಯದ ಅಸಮಾಧಾನ ವಿಚಾರವಾಗಿ ಸತೀಶ್ ಜಾರಕಿಹೊಳಿ ಪ್ರತಿಕ್ರಿಯೆ ನೀಡಿದ್ದರು.

## ಸಿ.ಎಂ.ಗೆ ಮಾಟ-ಮಂತ್ರ: ಸಿಬಿಐ ತನಿಖೆಯಾಗಲಿ

ರಾಮನಗರ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಯಾರೊ ಮಾಟಮಂತ್ರ ಮಾಡಿಸಿರುವುದರಿಂದ ಅಸಹಾಯಕರಾಗಿದ್ದಾರೆಂದು ಹೇಳಿರುವ ಶಾಸಕ ಕೆ.ಎನ್.ರಾಜಣ್ಣ ಅವರು, ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಸಿಬಿಐ ತನಿಖೆ ಮಾಡಿಸಲಿ ಎಂದು ಮಾಗಡಿ ಶಾಸಕ ಹೆಚ್.ಸಿ.ಬಾಲಕೃಷ್ಣ ಅವರು ವ್ಯಂಗ್ಯವಾಡಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರು ಅಸಹಾಯಕರಾಗಿದ್ದಾರೆಂದು ನನಗಂತೂ ಅನ್ನಿಸಿಲ್ಲ. ಅವರು ಎಂದಿನಂತೆ ಕೆಲಸ ಮಾಡುತ್ತಿದ್ದಾರೆ. ಮಾಟಮಂತ್ರ ಮಾಡಿಸಿದ್ದಾರೊ ಇಲ್ಲವೊ ಎಂಬುದು ರಾಜಣ್ಣ ಅವರಿಗೇ ಗೊತ್ತು ಎಂದರು. ಮಾಟ ಮಂತ್ರದ ಬಗ್ಗೆ ನನಗಂತು ನಂಬಿಕೆ ಇಲ್ಲ. ಹಾಗಾಗಿ, ರಾಜಣ್ಣ ಅವರು ಈ ವಿಷಯದ ಕುರಿತು ಸಿಬಿಐ ತನಿಖೆ ಮಾಡಿಸಲಿ. ಆಗ ನಿಜ ಗೊತ್ತಾಗುತ್ತದೆಂದು ಹೇಳಿದರು.

# ರಾಜ್ಯದಲ್ಲಿ ಆರ್ಥಿಕ ಅಸಮಾನತೆ: ಹೆಚ್.ಡಿ.ಕುಮಾರಸ್ವಾಮಿ

» ಮೊದಲನೇ ಪುಟದಿಂದ

ಅಯೋಧ್ಯೆ ಸೇರಿ ವಿವಿಧ ಕ್ಷೇತ್ರಗಳಿಗೆ ತೆರಳಿ ಭಕ್ತರು ಪ್ರಾರ್ಥನೆ ಸಲ್ಲಿಸುತ್ತಾರೆಂದು ಹೇಳಿದರು.

ಗ್ಯಾರಂಟಿಗಳ ಪರಿಣಾಮ ರಾಜ್ಯದ ಪ್ರತಿ ಪ್ರಜೆ ಮೇಲೆ 1 ಲ. ರೂ. ಸಾಲದ ಹೊರೆ ಹೇರಿದ್ದಾರೆ. ತಿಂಗಳಿಗೆ 2 ಸಾವಿರ ರೂ. ತೆಗೆದುಕೊಂಡು ಏನು ಮಾಡುತ್ತೀರಿ. ಎಷ್ಟು ವರ್ಷ ಕೊಡ ಬಲ್ಲರು, ಆ ಹಣದಲ್ಲಿ ಚಿಕಿತ್ಸೆ ಪಡೆ ಯಲು ಕೂಡ ಸಾಧ್ಯವಿಲ್ಲ. ಹಿಮಾ ಚಲದಲ್ಲಿ ಈಗಾಗಲೇ ಗ್ಯಾರಂಟಿಗಳ ಪ್ರಭಾವದಿಂದ ಅಧಿಕಾರಿಗಳಿಗೆ ಸಂಬಳ ನೀಡಲು ಆ ರಾಜ್ಯದ ಬೊಕ್ಕಸ ದಲ್ಲಿ ಹಣವಿಲ್ಲ. ರಾಜ್ಯದಲ್ಲೂ ಅಂತ ಹದ್ದೇ ಪರಿಸ್ಥಿತಿ ತಲೆದೋರಿದೆ ಎಂದು ಟೀಕಿಸಿದರು.

ಯುವ ಜನತೆ ವಿದ್ಯಾಭ್ಯಾಸ ಮುಗಿಸಿದ ನಂತರ ಉದ್ಯೋಗದಲ್ಲಿ ತೊಡಗಿಕೊಳ್ಳಿ. ಆದರೆ, ತಂದೆ-ತಾಯಿಯನ್ನು ಮರೆಯಬಾರದು, ಜೊತೆಗೆ ಕುಟುಂಬದ ನೆಮ್ಮದಿಗೆ ಹೆಚ್ಚು ಆದ್ಯತೆ ನೀಡಿ, ಜಾತಿ ವ್ಯಾಮೋಹ ಬದಿಗಿಟ್ಟು ಸಮಾಜದ ಒಗ್ಗಟ್ಟಿಗೆ ಪ್ರಾಮುಖ್ಯತೆ ನೀಡಬೇಕು. ಜಾತಿ ವ್ಯಾಮೋಹದಿಂದ ಯಾವುದೇ ಲಾಭವಿಲ್ಲವೆಂದು ಕರೆ ನೀಡಿದರು.

ಮಾಜಿ ಸಚಿವ ಹೆಚ್.ಡಿ.ರೇವಣ್ಣ ಮಾತನಾಡಿದರು. ಕಿರುಕೊಡ್ಲಿ ಮಠದ ಶ್ರೀಸಾಂಬ ಸದಾಶಿವ ಸ್ವಾಮೀಜಿ, ಚಿಲುಮೆ ಮಠದ ಶ್ರೀ ಜೈದೇವ ಸ್ವಾಮೀಜಿ, ತೋಟದಾರ್ಯ ಮಠದ ಶ್ರೀ ಬಸವಲಿಂಗಸ್ವಾಮೀಜಿ ಅವರು ಆಶೀರ್ವಚನ ನೀಡಿದರು. ಜೆಡಿಎಸ್ ಮುಖಂಡರಾದ ಬೆಮ್ಮತ್ತಿ ಸುರೇಶ್, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಹೆಚ್.ಬಿ.ವಿಶ್ವನಾಥ್, ಗ್ರಾಮದ ಮುಖಂಡರಾದ ಅಣ್ಣಾಜಪ್ಪ, ನಂಜೇಗೌಡ, ದೇವರಾಜೇಗೌಡ ಇತರರು ಉಪಸ್ಥಿತರಿದ್ದರು.

## ರಾಮ ರಾಜ್ಯ ಕನಸು ಸಾಕಾರಗೊಳಿಸಲು ಸಹಕರಿಸಿ

» ಮೊದಲನೇ ಪುಟದಿಂದ

ಹೃದಯದಲ್ಲಿ ನನಗೆ ಸ್ಥಾನ ಕೊಟ್ಟಿದ್ದಿರಿ. ಹೆಚ್.ಡಿ. ದೇವೇಗೌಡ ಅವರು ದೇಶದ ಪ್ರಧಾನಿ, ಮುಖ್ಯಮಂತ್ರಿ, ನೀರಾವರಿ ಸಚಿವರಾಗಿ ಕೆಲಸ ಮಾಡಲು ನಿಮ್ಮ ಆಶೀರ್ವಾದ ಕಾರಣ. ನಿಮ್ಮೆಲ್ಲರ ಋಣ ನಮ್ಮ ಮೇಲಿದೆ. ದೇವೇಗೌಡರನ್ನು ಹಾಸನದ ಜನರು ಹೇಗೆ ಪ್ರೀತಿಸುತ್ತಿರೋ ಬೆಂಗಳೂರಿನ ಜನರು ಅಷ್ಟೇ ಪ್ರೀತಿ ಹೊಂದಿದ್ದಾರೆ. ಹಾಗಾಗಿ ನಾನು ಅಲ್ಲಿ ರಾಜಕೀಯ ಪ್ರಾರಂಭಿಸಬೇಕಾಯಿತು. ಇನ್ನು ಮುಂದೆ ಜಿಲ್ಲೆಗೆ ಆದ್ಯತೆ ನೀಡುತ್ತೇನೆಂದರು.

ಗೃಹಲಕ್ಷ್ಮಿ ಹೆಸರಿನಲ್ಲಿ ಕೊಡುತ್ತಿರುವ ಎರಡು ಸಾವಿರ ರೂ.ಗೆ ತಾಯಂದಿರು ಮರುಳಾಗಬೇಡಿ. ಈ ಸರ್ಕಾರ 7 ಲಕ್ಷ 76 ಸಾವಿರ ಕೋಟಿ ರೂ. ಸಾಲ ಮಾಡಿದೆ. ಅಧಿಕಾರದಲ್ಲೇ ಶಾಶ್ವತವಾಗಿ ಇವರೇ ಇರುವುದಿಲ್ಲ. ಮುಂದೆ ಬರುವ ಬೇರೆ ಸರ್ಕಾರಕ್ಕೆ ಅದರ ಬಿಸಿ ತಟ್ಟುತ್ತದೆ. ಅವರು ನಿಮಗೆ ಧರ್ಮಕ್ಕೆ ಹಣ ಕೊಡುವುದಿಲ್ಲ. ಸಾವಿರ ರೂಪಾಯಿ ಆಸೆಗೆ ಲಕ್ಷಾಂತರ ರೂಪಾಯಿ ಸಾಲಗಾರರಾಗಬೇಡಿ ಎಂದರು. ಮಾಜಿ ಸಚಿವರಾದ ಹೆಚ್.ಡಿ.ರೇವಣ್ಣ, ಹೆಚ್.ಕೆ.ಕುಮಾರಸ್ವಾಮಿ ಇದ್ದರು.

## ಎಸ್‌ಎಸ್‌ಎಲ್‌ಸಿ: ಜಿಲ್ಲೆಗೆ 4ನೇ ಸ್ಥಾನ

» ಮೊದಲನೇ ಪುಟದಿಂದ

ಪಡೆದಿದ್ದಾರೆ. ಎ+ ಶ್ರೇಣಿಯಲ್ಲಿ ಶೇ.11.49 ರಷ್ಟು ಮತ್ತು ಎ ಶ್ರೇಣಿಯಲ್ಲಿ ಶೇ.19.91 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಬಿ, ಬಿ+ ಮತ್ತು ಸಿ ಶ್ರೇಣಿಗಳಲ್ಲೂ ಗಣನೀಯ ಸಂಖ್ಯೆಯ ವಿದ್ಯಾರ್ಥಿಗಳು ಇದ್ದಾರೆ. ವಿಷಯವಾರು ಫಲಿತಾಂಶದಲ್ಲೂ ಸಾಧನೆ ತೋರಿ ದ್ದಾರೆ. ಪ್ರಥಮ ಭಾಷಾ ವಿಷಯಯಲ್ಲಿ ಶೇ.99 ರಷ್ಟು ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಗಣಿತದಲ್ಲಿ ಶೇ.99.18, ವಿಜ್ಞಾನದಲ್ಲಿ ಶೇ.99.36 ಮತ್ತು ಸಮಾಜ ವಿಜ್ಞಾನದಲ್ಲಿ ಶೇ.98.74ರಷ್ಟು ಫಲಿತಾಂಶ ದಾಖಲಾಗಿದೆ.

## ಎನ್‌ಡಿಎ ಸರ್ಕಾರದ ತುಘಲಕ್ ನೀತಿಗೆ ಸೋಲು

» ಮೊದಲನೇ ಪುಟದಿಂದ

**ಮೀಸಲಾತಿ ಜಾರಿಗೊಳಿಸಲಿ ಎಂದು ಸವಾಲೆಸೆದರು.**

ಲೋಕಸಭೆಯಲ್ಲಿ ಮಸೂದೆಗೆ ಹಿನ್ನಡೆಯಾದ ಬೆನ್ನಲ್ಲೇ ಬಿಜೆಪಿ ನಾಯಕರು ಪ್ರತಿಭಟನೆ, ಸುದ್ದಿಗೋಷ್ಠಿ ಮೂಲಕ ಕಾಂಗ್ರೆಸ್ ಮಹಿಳಾ ವಿರೋಧಿ ಎಂಬ ಹಣೆಪಟ್ಟಿ ಕಟ್ಟಲು ಯತ್ನಿಸುತ್ತಿದೆ. ಮನುವಾದಿಗಳ ಕುತಂತ್ರ ಬುದ್ಧಿಯನ್ನು ಅರಿತಿರುವ ದೇಶದ ಜನರು ಅಷ್ಟು ಸುಲಭಕ್ಕೆ ಅವರ ಸುಳ್ಳನ್ನು ನಂಬುವುದಿಲ್ಲವೆಂದು ವಾಗ್ದಾಳಿ ನಡೆಸಿದರು. ಬೇಲೂರು ಪುರಸಭೆ ಮಾಜಿ ಅಧ್ಯಕ್ಷೆ ತೀರ್ಥಕುಮಾರಿ, ಅರಸೀಕೆರೆಯ ಮಂಜುಳಾಬಾಯಿ, ಶೃತಿ ಇದ್ದರು.

## ಏ.26ಕ್ಕೆ ಸರ್ಕಾರಿ ನೌಕರರ ಸಾಂಸ್ಕೃತಿಕ-ಸಾಹಿತ್ಯ ಪರಿಷತ್ ಕಾರ್ಯಕ್ರಮ

**ಹಾಸನ:** ರಾಜ್ಯ ಸರ್ಕಾರಿ ನೌಕರರ ಸಾಂಸ್ಕೃತಿಕ ಮತ್ತು ಸಾಹಿತ್ಯ ಪರಿಷತ್ ಪದಾಧಿಕಾರಿಗಳ ಪದಗ್ರಹಣ ಹಾಗು ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನ ಸಮಾರಂಭವನ್ನು ಏ.26ರಂದು ಧಾರವಾಡದಲ್ಲಿ ಆಯೋಜಿಸಲಾಗಿದೆ ಎಂದು ಪರಿಷತ್ ರಾಜ್ಯ ಉಪಾಧ್ಯಕ್ಷ ಬಿ.ಕೆ.ರವೀಂದ್ರ ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ಸರ್ಕಾರಿ ನೌಕರರಲ್ಲಿ ಅಡಗಿರುವ ಸುಪ್ತ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಉದ್ದೇಶದಿಂದ ಸಾಂಸ್ಕೃತಿಕ ಸಮಿತಿ ಮತ್ತು ಸಾಹಿತ್ಯ ಪರಿಷತ್ ರಚಿಸಲಾಗಿದೆ. ಸರ್ಕಾರಿ ನೌಕರರ ಸಂಘಕ್ಕೆ ಇದು ಪರ್ಯಾಯ ಸಂಘಟನೆ ಯಲ್ಲ. ಸರ್ಕಾರಿ ನೌಕರರ ಸಂಘದಿಂದ ಕ್ರೀಡಾಕೂಟ ಹಾಗು ಮತ್ತಿತರ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ಆದರೆ ಇದು ಅದಕ್ಕಿಂತ ವಿಭಿನ್ನವಾದ ಸಂಘಟನೆಯಾಗಿದೆ ಎಂದರು.

ಭಾನುವಾರ ಬೆಳಿಗ್ಗೆ 10 ರಿಂದ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಪಾಟೀಲ್ ಪುಟ್ಟಪ್ಪ ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಪ್ರತಿ ಜಿಲ್ಲೆಯ ಒಬ್ಬರಿಗೆ ಕಾಯಕ ರತ್ನ ಹಾಗು ಅತ್ಯುತ್ತಮ ಸೇವಾ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ನಗರದ ವಾಣಿ ವಿಲಾಸ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿ ಎಂ.ಎನ್.ಮೀನಾಕ್ಷಿ ಅವರು ಈ ಸಾಲಿನ ಪ್ರಶಸ್ತಿಗೆ ಭಾಜನರಾಗಿದ್ದಾರೆಂದರು.

ಸರ್ಕಾರಿ ನೌಕರರನ್ನು ಸಾಹಿತ್ಯಾತ್ಮಕವಾಗಿ ಒಟ್ಟುಗೂಡಿಸುವುದು ನಮ್ಮ ಉದ್ದೇಶ. ನೌಕರರಲ್ಲಿ ಕನ್ನಡಾಭಿಮಾನ ಬೆಳೆಸುವುದು, ನಾಡು ನುಡಿಗೆ ಸಂಬಂಧಿಸಿ ರಾಜ್ಯಾದ್ಯಂತ ವಿವಿಧ ಕಾರ್ಯಕ್ರಮ ಆಯೋಜನೆ, ಉದ್ಯೋಗ ಮೇಳ, ಆರೋಗ್ಯ ತಪಾಸಣೆ, ರಕ್ತದಾನ ಶಿಬಿರ ಹೀಗೆ ನಾನಾ ಕಾರ್ಯಕ್ರಮ ಆಯೋಜಿಸಲಾಗುವುದೆಂದು ಹೇಳಿದರು.

ರಾಜ್ಯ ಸರ್ಕಾರಿ ನೌಕರರ ಸಾಂಸ್ಕೃತಿಕ ಮತ್ತು ಸಾಹಿತ್ಯ ಪರಿಷತ್‌ನ ಸಹ ಕಾರ್ಯದರ್ಶಿ ಬಿ.ಆರ್.ಲತಾ, ಜಿಲ್ಲಾಧ್ಯಕ್ಷ ಎಸ್.ಎಲ್.ರಂಗಸ್ವಾಮಿ, ಜಿಲ್ಲಾ ಗೌರವಾಧ್ಯಕ್ಷ ರಾಜಶೇಖರ್, ಖಜಾಂಚಿ ಸಿ.ಆರ್.ಯೋಗೇಶ್, ಜಯಶಂಕರ ಬೆಳಗುಂಬ ಹಾಜರಿದ್ದರು.

## ಅಂಚೆ ನೌಕರನ ಮಗನ ಸುಮೇಧ ಅದ್ಭುತ ಸಾಧನೆ



**ಹಾಸನ:** ಆಲೂರು ತಾಲ್ಲೂಕಿನ ಬಾವಸವಳ್ಳಿ ಗ್ರಾಮದ ನಿವಾಸಿ, ಹಾಸನದ ಮುಖ್ಯಅಂಚೆ ಕಚೇರಿಯಲ್ಲಿ ನೌಕರರಾಗಿರುವ ಬಿ.ಆರ್. ಶಿವಣ್ಣ ಮತ್ತು ಜಯಂತಿ ದಂಪತಿಯ ಪುತ್ರನಾಗಿರುವ ಸುಮೇಧ ಮೌರ್ಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 623 ಅಂಕಗಳನ್ನು ಗಳಿಸುವ ಮೂಲಕ ಜಿಲ್ಲೆಗೆ ಪ್ರಥಮ, ರಾಜ್ಯಕ್ಕೆ ಮೂರನೇ ಸ್ಥಾನ ಪಡೆಯುವ ಮೂಲಕ ಉತ್ತಮ ಸಾಧನೆ ಮಾಡಿದ್ದಾನೆ.

ಆಲೂರು ತಾಲ್ಲೂಕು ಬೈರಾಪುರದಲ್ಲಿರುವ ಬೆಥೆಸ್ಥಾ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿ ಯಾಗಿರುವ ಸುಮೇಧ ಮೌರ್ಯ, ತನ್ನ ಪ್ರತಿಭೆ ಮತ್ತು ಶ್ರಮದ ಮೂಲಕ ಹೆಚ್ಚಿನ ಅಂಕ ಗಳಿಸುವ ಮೂಲಕ ಜಿಲ್ಲೆಗೆ ಕೀರ್ತಿ ತಂದಿದ್ದಾನೆ. ಈತ ಗಣಿತ ಹಾಗು ವಿಜ್ಞಾನ ವಿಷಯಗಳಲ್ಲಿ ತಲಾ 100ಕ್ಕೆ 99 ಅಂಕಗಳನ್ನು ಗಳಿಸಿದ್ದು, ಉಳಿದ ಎಲ್ಲಾ ವಿಷಯಗಳಲ್ಲಿ 100ಕ್ಕೆ 100 ಅಂಕ ಗಳನ್ನು ಪಡೆದಿದ್ದಾನೆ.

ಮಗನ ಈ ಯಶಸ್ಸಿಗೆ ತಂದೆ-ತಾಯಿ ಸಂತೋಷ ವ್ಯಕ್ತಪಡಿಸಿದ್ದು, ನಮ್ಮ ಮಗನ ಪರಿಶ್ರಮದ ಫಲವೇ ಇದು. ಅವನಿಗೆ ಬೇಕಾದ ಪ್ರೋತ್ಸಾಹ ಮತ್ತು ಬೆಂಬಲ ನೀಡಿದ್ದೇವೆ. ಅವನು ಇನ್ನೂ ದೊಡ್ಡ ಸಾಧನೆ ಮಾಡಲಿ ಎಂದು ಆಶಿಸಿದ್ದಾರೆ. ಶಿಕ್ಷಕರು ಹಾಗು ಶಾಲಾ ಆಡಳಿತ ಮಂಡಳಿ ಕೂಡ ಸುಮೇಧನ ಸಾಧನೆಯನ್ನು ಮೆಚ್ಚಿ ಅಭಿನಂದಿಸಿದ್ದು, ಅವನ ಸಾಧನೆ ಇತರೆ ವಿದ್ಯಾರ್ಥಿ ಗಳಿಗೆ ಪ್ರೇರಣೆಯಾಗಿದೆ ಎಂದು ಹೇಳಿದ್ದಾರೆ. ಗ್ರಾಮೀಣ ಹಿನ್ನಲೆಯಿಂದ ಬಂದ ವಿದ್ಯಾರ್ಥಿ ಯೊಬ್ಬ ರಾಜ್ಯ ಮಟ್ಟದಲ್ಲಿ ಮೂರನೇ ಸ್ಥಾನ ಪಡೆದು ಜಿಲ್ಲೆಗೆ ಕೀರ್ತಿ ತಂದುಕೊಟ್ಟಿರುವುದು ಎಲ್ಲರಲ್ಲೂ ಸಂತಸ ಮೂಡಿಸಿದೆ.

## ಅರವಿಂದ ಶಾಲೆಗೆ ಶೇ.100 ಫಲಿತಾಂಶ

• ಪ್ರಜೋದಯ ವರದಿ





**ಹಾಸನ:** ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶದಲ್ಲಿ ನಗರದ ಶ್ರೀ ಅರವಿಂದ ವಿದ್ಯಾ ಸಂಸ್ಥೆ ಅನುದಾನಿತ ಹಾಗು ಅನುದಾನ ರಹಿತ ವಿಭಾಗ ಶೇ.100 ರಷ್ಟು ಫಲಿತಾಂಶ ಪಡೆದಿದೆ.

ಎಸ್.ರಮ್ಯಾ ಅವರು 625ಕ್ಕೆ 616 ಅಂಕ ಪಡೆದು (ಶೇ.98.56) ಶಾಲೆಗೆ ಪ್ರಥಮ ಹಾಗು ಸುಭಾಷ್ ಗೌಡ 610 ಅಂಕ ಪಡೆದು ದ್ವಿತೀಯ ಸ್ಥಾನ ಪಡೆದಿದ್ದಾರೆ.

ಎಲ್ಲಾ ವಿದ್ಯಾರ್ಥಿಗಳಿಗೆ ಶಾಲೆಯ ಆಡಳಿತ ಮಂಡಳಿ, ಶಿಕ್ಷಕ ವರ್ಗ ಹಾಗು ಬೋಧಕೇತರ ಸಿಬ್ಬಂದಿ ಅಭಿನಂದನೆ ಸಲ್ಲಿಸಿದ್ದಾರೆ.

## ಎಲೈಟ್ ಶಾಲೆಯ ಕುಶಾಲ್‌ಗೆ 617 ಅಂಕ

• ಪ್ರಜೋದಯ ವರದಿ





**ಹಾಸನ:** ಇಲ್ಲಿನ ಹೇಮಾವತಿ ನಗರದಲ್ಲಿರುವ ಎಲೈಟ್ ಶಾಲೆಯು 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ಸತತ 16ನೇ ವರ್ಷವೂ ಶೇ. 100 ಫಲಿತಾಂಶ ಪಡೆದಿದೆ. ಪರೀಕ್ಷೆಗೆ ಹಾಜರಾಗಿದ್ದ ಒಟ್ಟು 49 ವಿದ್ಯಾರ್ಥಿಗಳಲ್ಲಿ 18 ಮಕ್ಕಳು ಅತ್ಯುನ್ನತ ಶ್ರೇಣಿಯಲ್ಲಿ ಮತ್ತು 30 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಒಬ್ಬ ವಿದ್ಯಾರ್ಥಿಯು ದ್ವಿತೀಯ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಹೆಚ್.ಸಿ. ಕುಶಾಲ್ 617 ಅಂಕ ಪಡೆದು (ಶೇ. 98.72) ಪ್ರಥಮ ಹಾಗು ನಕ್ಷತ್ರ 616 ಅಂಕ ಪಡೆದು (ಶೇ. 98.56) ಶಾಲೆಗೆ ಕೀರ್ತಿ ತಂದಿದ್ದಾರೆ. ಶಾಲೆಯ ಪ್ರಾಂಶುಪಾಲ, ಶಿಕ್ಷಕರು ಹಾಗು ಬೋಧಕೇತರ ಸಿಬ್ಬಂದಿ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದ್ದಾರೆ.

## ಮೊದಲನೇ ಹೆಂಡತಿ ಮಕ್ಕಳಿಂದ ಕಿರುಕುಳ: ಆರೋಪ

• ಪ್ರಜೋದಯ ವರದಿ



**ಹಾಸನ:** ಮೊದಲನೇ ಹೆಂಡತಿ ಮಕ್ಕಳು ನನ್ನ ಹಾಗು ಎರಡನೇ ಹೆಂಡತಿ ಮೇಲೆ ಹಲ್ಲೆ ಮಾಡುತ್ತಿದ್ದು ರಕ್ಷಣೆ ನೀಡಬೇಕೆಂದು ಹೊಳೆನರಸೀಪುರದ ರಾಜೇಗೌಡ ಅವರು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ಮೊದಲ ಹೆಂಡತಿ 2 ವರ್ಷಗಳ ಹಿಂದೆ ನಿಧನರಾಗಿದ್ದಾರೆ. ಇಬ್ಬರು ಹೆಣ್ಣು ಹಾಗು ಒಬ್ಬ ಮಗನಿದ್ದು ಎಲ್ಲರಿಗೂ ಮದುವೆ ಮಾಡಲಾಗಿದೆ. ಹೆಂಡತಿ ತೀರಿ ಹೋದ ಬಳಿಕ ನನಗೆ ಅಡುಗೆ ಮಾಡಿಕೊಡಲು ಯಾರೂ ಇಲ್ಲವಾದರು. ಪುತ್ರ ಜಿ.ಆರ್. ಮಂಜು ಸಹ ಹೆಂಡತಿ ಮಾತು ಕೇಳಿ ನನ್ನ ಜೊತೆ ವಾಗ್ವಾದ ಶುರು ಮಾಡಿದ. ನಾನು ಗಳಿಸಿದ್ದ ಆಸ್ತಿಯನ್ನು ಮಗನಿಗೆ ಖಾತೆ ಮಾಡಿಕೊಟ್ಟಿದ್ದು ನನಗಾಗಿ ಒಂದು ಮನೆ ಇಟ್ಟುಕೊಂಡಿದ್ದೇನೆ. ಹೆಣ್ಣು ಮಕ್ಕಳಿಗೂ ಒಳ್ಳೆಯ ಸಂಬಂಧ ಹುಡುಕಿ ಮದುವೆ ಮಾಡಿಸಿದ್ದೇನೆ. ಆದರೆ ಈಗ ಮೂವರು ಮಕ್ಕಳು ಒಂದಾಗಿ ನನ್ನ ಮೇಲೆ ಹಲ್ಲೆಗೆ ಮುಂದಾಗಿದ್ದಾರೆಂದು ಅಳಲು ತೋಡಿಕೊಂಡರು.

ವೃದ್ಧಾಪ್ಯದಲ್ಲಿ ನೋಡಿಕೊಳ್ಳಲು ಆಸರೆಯಾಗಿರಲಿ ಎಂಬ ಉದ್ದೇಶದಿಂದ ಕಳೆದ ನವೆಂಬರ್‌ನಲ್ಲಿ ಎರಡನೇ ಮದುವೆಯಾಗಿದ್ದೇನೆ. ಆದರೆ ಮಕ್ಕಳು ನಮಗೆ ವಿಪರೀತ ಕಿರುಕುಳ ನೀಡುತ್ತಿದ್ದಾರೆ. ವಯೋಸಹಜ ಖಾಯಿಲೆಯಿಂದ ಬಳಲುತ್ತಿರುವ ನನಗೆ ಮಕ್ಕಳ ಕಾಟ ಹೆಚ್ಚಾಗಿದೆ ಎಂದರು.

ನನಗೆ ಆಗುತ್ತಿರುವ ಅನ್ಯಾಯ ಖಂಡಿಸಿ ಹೊಳೆನರಸೀಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದೆ. ತಂದೆಯ ಮೇಲೆ ಹಲ್ಲೆ ಮಾಡದಂತೆ ಮಕ್ಕಳಿಗೆ ಪೊಲೀಸರು ಎಚ್ಚರಿಕೆ ನೀಡಿದ್ದರೂ ಪ್ರಯೋಜನವಾಗಿಲ್ಲ. ಪೊಲೀಸರು ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುತ್ತಿಲ್ಲ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಜಿಲ್ಲಾಧಿಕಾರಿ, ಹೊಳೆನರಸೀಪುರ ಜೆಎಂಎಫ್‌ಸಿ ನ್ಯಾಯಾಧೀಶರಿಗೂ ಮನವಿ ಸಲ್ಲಿಸಿದ್ದೇನೆಂದರು.

ನನ್ನ ಮಕ್ಕಳಿಂದ ಆಗುತ್ತಿರುವ ಹಿಂಸೆಯನ್ನು ತಪ್ಪಿಸದೆ ಇದ್ದರೆ ಅಥವಾ ನನ್ನ ಜೀವಕ್ಕೆ ಅನಾಹುತವಾದರೆ ಹೊಳೆನರಸೀಪುರ ಪೊಲೀಸರೇ ಕಾರಣರಾಗುತ್ತಾರೆಂದರು.

## ಹಳ್ಳಿ ವಿದ್ಯಾರ್ಥಿಗಳ ಮೇಲುಗೈ

### ಸರ್ಕಾರಿ ಶಾಲೆಗಳಲ್ಲಿಲ್ಲ ಶೂನ್ಯ ಫಲಿತಾಂಶ

• ಪ್ರಜೋದಯ ವರದಿ




**ಬೆಂಗಳೂರು:** ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ನಗರ ಪ್ರದೇಶದ ವಿದ್ಯಾರ್ಥಿಗಳಿಗಿಂತ ಹೆಚ್ಚಿನ ಸಾಧನೆ ಮಾಡಿದ್ದಾರೆ. ಜೊತೆಗೆ ಯಾವುದೇ ಸರ್ಕಾರಿ ಶಾಲೆಗಳಲ್ಲಿ ಕೂಡ ಶೂನ್ಯ ಫಲಿತಾಂಶ ದಾಖಲಾಗದ್ದು ವಿಶೇಷ.

ಪರೀಕ್ಷೆಗೆ ಹಾಜರಾದ ಗ್ರಾಮಾಂತರ ಪ್ರದೇಶದ ಶೇ.94.80 ವಿದ್ಯಾರ್ಥಿಗಳು ಉತ್ತೀರ್ಣ ರಾದರೆ, ನಗರ ಪ್ರದೇಶದ ಶೇ.93.2 ವಿದ್ಯಾರ್ಥಿಗಳು ತೇರ್ಗಡೆಗೊಂಡಿದ್ದಾರೆ. ಅಂದರೆ ನಗರ ಪ್ರದೇಶಕ್ಕಿಂತ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ತೇರ್ಗಡೆ ಪ್ರಮಾಣ ಹೆಚ್ಚಿದೆ. 6,176 ಶಾಲೆಗಳು ಶೇ.100 ಫಲಿತಾಂಶ ಪಡೆದಿದ್ದು, ಅದರಲ್ಲಿ 2,393 ಸರ್ಕಾರಿ ಶಾಲೆಗಳು, 824 ಅನುದಾನಿತ ಶಾಲೆಗಳು, 2,959 ಅನುದಾನರಹಿತ ಶಾಲೆಗಳು ಇವೆ. 27 ಶಾಲೆಗಳಲ್ಲಿ ಶೂನ್ಯ ಫಲಿತಾಂಶ ದಾಖಲಾಗಿದ್ದು, ಈ ಪೈಕಿ ಯಾವುದೇ ಸರ್ಕಾರಿ ಶಾಲೆಗಳು ಇಲ್ಲ ಎನ್ನುವುದು ಗಮನಾರ್ಹ. 5 ಅನುದಾನಿತ ಶಾಲೆಗಳು ಹಾಗೂ 22 ಅನುದಾನರಹಿತ ಶಾಲೆಗಲ್ಲಿ ಶೂನ್ಯ ಫಲಿತಾಂಶ ದಾಖಲಾಗಿವೆ.

# ಸರ್ಕಾರವೇ ಯತಿಗಳ ಜಯಂತಿ ಮಾಡಲಿ: ಹೆಚ್.ಡಿ.ರೇವಣ್ಣ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ರಾಮಾನುಜಾಚಾರ್ಯರು, ಮಧ್ವಾಚಾರ್ಯರು ಹಾಗು ಶಂಕರ ಚಾರ್ಯರರ ಜಯಂತಿಯನ್ನು ಸರ್ಕಾರವೇ ಅದ್ದೂರಿಯಾಗಿ ಆಚರಿಸಬೇಕೆಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಆಗ್ರಹಿಸಿದರು.

ಪಟ್ಟಣದ ಹೊರವಲಯದಲ್ಲಿರುವ ಅರಳ ಬರಗೂರು ಚೌಡೇನಹಳ್ಳಿ ಗ್ರಾಮದಲ್ಲಿ ಆಯೋಜಿಸಿದ್ದ ರಾಮಾನುಜ ತಿರುನಕ್ಷತ್ರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಮಾನುಜಾ ಚಾರ್ಯರ 1009ನೇ ಜಯಂತಿ ಪ್ರಯುಕ್ತ ಶಂಕರಾಚಾರ್ಯರ ಜಯಂತಿಯನ್ನು ಶ್ರೀವೈಷ್ಣವ ಸಮಾಜದವರು ಆಚರಣೆ ಮಾಡುತ್ತಿರುವುದು ಶ್ಲಾಘನೀಯ. ಸರ್ಕಾರದ ವತಿಯಿಂದ ಕೇವಲ ಶಂಕರಾಚಾರ್ಯರ ಜಯಂತಿ ಆಚರಿಸುತ್ತಿದ್ದು, ಮುಂದಿನ ದಿನದಲ್ಲಿ ರಾಮಾನುಜಾಚಾರ್ಯ ಮತ್ತು ಮಧ್ವರ ಜಯಂತಿಯನ್ನು ಸರ್ಕಾರವೇ ಮಾಡಲಿ ಎಂದರು.

ನೂರಾರು ವರ್ಷಗಳ ಹಿಂದೆ ಸಮಾಜಕ್ಕೆ ತಮ್ಮ ಸಿದ್ಧಾಂತಗಳ ಮೂಲಕ ಧಾರ್ಮಿಕ ಚಿಂತನೆ ಯೊಟ್ಟಿಗೆ ವೇದೋಪನಿಷತ್ತುಗಳನ್ನು ಪರಿಚಯಿಸಿದ ರಾಮಾನುಜಚಾರ್ಯರು, ಮಧ್ವಾಚಾರ್ಯರು ಹಾಗು ಶಂಕರಚಾರ್ಯರ ಕೊಡುಗೆ ಅಪಾರ. ಅವರ ಜಯಂತಿಯನ್ನು ಆಚರಿ ಸುವ ಮೂಲಕ ಮುಂದಿನ ಪೀಳಿಗೆಗೂ ಅವರ ತತ್ವ ಸಿದ್ಧಾಂತಗಳನ್ನು ತಿಳಿಸಿಕೊಡಬೇಕಿದೆ ಎಂದರು.

ಶಾಸಕ ಸಿ.ಎನ್.ಬಾಲಕೃಷ್ಣ ಅವರು ಮಾತನಾಡಿ, ರಾಮಾನುಜಾಚಾರ್ಯರು ನವಸಮಾಜ ನಿರ್ಮಾಣ ಮಾಡಲು ಸಾಕಷ್ಟು ಪರಿಶ್ರಮ ಪಟ್ಟಿದ್ದು, ಅವರ ಆದರ್ಶಗಳಿಗೆ ಇಂಬು ನೀಡುವ ಉದ್ದೇಶದಿಂದ ಪೇಜಾವರ ಶ್ರೀಗಳು ದಲಿತರಿಗೂ ದೀಕ್ಷೆ ನೀಡಿದ್ದು ಮಹತ್ವದ ಮೈಲಿಗಲ್ಲು ಎಂದರು.

ವಿಧಾನಸಭಾ ಕ್ಷೇತ್ರದಲ್ಲಿ ಸುಮಾರು 250 ಕುಟುಂಬಕ್ಕೂ ಹೆಚ್ಚು ಶ್ರೀವೈಷ್ಣವ ಸಮಾಜ ವಾಸವಿದ್ದು, ಕಳೆದ 5 ವರ್ಷದ ಹಿಂದೆಯೇ ದೇವಾಲಯಕ್ಕೆ ಕುಡಿಯುವ ಮತ್ತು ಇತರೆ ಬಳಕೆಗೆ ಅನುಕೂಲವಾಗಲೆಂದು ಕೊಳವೆ ಬಾವಿ ವ್ಯವಸ್ಥೆ ಮಾಡಲಾಗಿದೆ. ಹೆಚ್.ಡಿ.ರೇವಣ್ಣ ಅವರು ರಸ್ತೆ ಮತ್ತು ಸಿಮೆಂಟ್ ರಸ್ತೆ ಮಾಡಿಸಿದ್ದಾರೆ. ಮುಂದಿನ ದಿನದಲ್ಲಿ ಸಮಾಜಕ್ಕೆ ಒಂದು ಭವನ ಬೇಕೆಂದು ಬೇಡಿಕೆ ಇಟ್ಟಿದ್ದು, ಚರ್ಚಿಸಿ ಕ್ರಮ ವಹಿಸಲಾಗುವುದೆಂದರು.

ರಾಮಾನುಜಾಚಾರ್ಯರ ಜೀವನ ಚರಿತ್ರೆ ಬಗ್ಗೆ ಸಂತಶ್ರೀ ಲೋಕೇಶ್ ದಾಸರು ಉಪನ್ಯಾಸ ನೀಡಿದರು. ಪತ್ರಕರ್ತ ರವಿ ಎಸ್.ಗೌಡ, ಉದ್ಯಮಿ ಸುರೇಶ್, ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ, ಚನ್ನರಾಯಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಣತಿ ಆನಂದ್, ಬಿಜೆಪಿ ಮುಖಂಡ ಚಿದಾನಂದ್, ಪುರಸಭಾ ಮಾಜಿ ಸದಸ್ಯ ಶಶಿಧರ್, ಡಿವೈಎಸ್ಪಿ ಎನ್.ಕುಮಾರ್, ಜಿಲ್ಲಾ ಶ್ರೀವೈಷ್ಣವ ಸೇವಾ ಸಭಾದ ಜಿಲ್ಲಾಧ್ಯಕ್ಷ ವಲಗೇರಹಳ್ಳಿ ಶ್ರೀಧರ್ ಮೂರ್ತಿ, ನಿರ್ದೇಶಕ ಸುನಿಲ್ ಕುಂಬೇನಹಳ್ಳಿ ಮತ್ತಿತರರಿದ್ದರು.

## ಚ.ರಾ.ಪಟ್ಟಣ ತಾಲ್ಲೂಕಿಗೆ ಶೇ.99.21 ಫಲಿತಾಂಶ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶ ಗುರುವಾರ ಪ್ರಕಟ ಗೊಂಡಿದ್ದು ತಾಲ್ಲೂಕಿಗೆ ಶೇ.98.21 ಫಲಿತಾಂಶ ಸಾಧಿಸಿದೆ.

ತಾಲ್ಲೂಕಿನ 76 ಶಾಲೆಗಳಿಂದ 2,808 ವಿದ್ಯಾರ್ಥಿಗಳು ಹಾಜರಾಗಿ 2,758 ಮಕ್ಕಳು ಉತ್ತೀರ್ಣರಾಗಿದ್ದಾರೆ. ರಾಧಾಕೃಷ್ಣ ವಿದ್ಯಾ ಶಾಲೆಯ ಭೂಮಿಕಾ 625ಕ್ಕೆ 621 ಅಂಕ ಪಡೆಯುವ ಮೂಲಕ ಶೇ.99.36 ಗಳಿಸಿ ತಾಲ್ಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ.


ಗೂರಮಾರನಹಳ್ಳಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕುಮಾರ ಸಿ.ವೈ.ಜಸ್ವಂತ್ ಆಚಾರ್ 620 ಅಂಕಗಳೊಂದಿಗೆ (ಶೇ.99.2) ದ್ವಿತೀಯ ಹಾಗು ಇಂಪನ 618 ಅಂಕ ಪಡೆದು ಶೇ.99.88 ಫಲಿತಾಂಶ ಗಳಿಸಿದ್ದಾರೆ. ಪಟ್ಟಣದ ಸರ್ಕಾರಿ ಪ್ರೌಢಶಾಲೆಯ (ಹೊಸದು) ಕೆ.ಟಿ. ಲತಿಕಾ 618 ಅಂಕ ಪಡೆದು ಶೇ.99.88 ಗಳಿಸುವುದರೊಂದಿಗೆ ಮೂರನೇ ಸ್ಥಾನವನ್ನು ಹಂಚಿಕೊಂಡಿದ್ದಾರೆ. ತಾಲ್ಲೂಕಿನ ಸರ್ಕಾರಿ, ಅನುದಾನ, ಅನುದಾನ ರಹಿತ 76 ಶಾಲೆಗಳಲ್ಲಿ 50 ಶಾಲೆಗಳು ಶೇ.100 ರಷ್ಟು ಫಲಿತಾಂಶ ದಾಖಲಿಸಿದೆ.

## ಟೈಮ್ಸ್ ಶಾಲೆಗೆ ಶೇ.100 ಫಲಿತಾಂಶ

• ಪ್ರಜೋದಯ ವರದಿ

**ಹಾಸನ:** ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಟೈಮ್ಸ್ ಅಂತಾರಾಷ್ಟ್ರೀಯ ಶಾಲೆ ಶೇ.100 ಫಲಿತಾಂಶ ಗಳಿಸಿದೆ.

ಪರೀಕ್ಷೆ ಬರೆದ 105 ವಿದ್ಯಾರ್ಥಿಗಳು ಉತ್ತಮ ಅಂಕಗಳನ್ನು ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ. ವಿದ್ಯಾರ್ಥಿನಿ ಯಶಸ್ವಿನಿ 616 ಅಂಕ ಪಡೆದು ರಾಜ್ಯಕ್ಕೆ 9 ಹಾಗು ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ. 97 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿ, 8 ಮಕ್ಕಳು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಎಲ್ಲಾ ವಿದ್ಯಾರ್ಥಿಗಳನ್ನು ಸಂಸ್ಥೆಯ ಕಾರ್ಯದರ್ಶಿ ಬಿ.ಕೆ.ಗಂಗಾಧರ್ ಹಾಗು ಶಿಕ್ಷಕ ವೃಂದ ಅಭಿನಂದಿಸಿದೆ.







## ತಪಸ್ಸಿನಿಂದ ಧರೆಗೆ ನೀರು ಹರಿಸಿದ ಭಗೀರಥ ಮಹರ್ಷಿ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಭಗೀರಥ ಮಹರ್ಷಿ ಕಠಿಣ ತಪಸ್ಸಿನಿಂದ ಗಂಗೆಯನ್ನು ಭೂಮಿಗೆ ಇಳಿಸಿ, ಭೂಲೋಕದ ಸಕಲ ಜೀವಿಗಳ ದಾಹ ತಣಿಸಿದ ಮಹಾತ್ಮ ಎಂದು ತಹಶೀಲ್ದಾರ್ ಜಿ.ಎಸ್.ಶಂಕರಪ್ಪ ಅವರು ತಿಳಿಸಿದರು.

ಪಟ್ಟಣದ ಮಿನಿ ವಿಧಾನಸೌಧ ಆವರಣದಲ್ಲಿ ಗುರುವಾರ ತಾಲ್ಲೂಕು ಆಡಳಿತ, ತಾಲ್ಲೂಕು ಉಪ್ಪಾರ ಸಂಘದಿಂದ ನಡೆದ ಮಹರ್ಷಿ ಭಗೀರಥ ಜಯಂತಿಯಲ್ಲಿ ಭಗೀರಥರ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಅವರು ಮಾತನಾಡಿ, ಭಾರತೀಯ ಸಂಸ್ಕೃತಿ ಇಡೀ ಪ್ರಪಂಚದಲ್ಲಿಯೇ ವಿಶಿಷ್ಟತೆ ಹೊಂದಿದ್ದು, ಅನೇಕ ದಾರ್ಶನಿಕರು, ಸಾಧು ಸಂತರು, ಸತ್ಪುರುಷರನ್ನು ಪ್ರಪಂಚಕ್ಕೆ ಕೊಡುಗೆಯಾಗಿ ನೀಡಿದೆ. ಅವರೆಲ್ಲರೂ ಸಕಲ ಮನುಕುಲಕ್ಕೆ ದಾರಿ ದೀಪವಾಗಿದ್ದಾರೆ. ಅಂತಹ ಸತ್ಪುರುಷರಲ್ಲಿ ಭಗೀರಥ ಮಹರ್ಷಿ ಪ್ರಮುಖರೆಂದರು.

ದಾರ್ಶನಿಕರ ಸಾಧನೆ ಅವರು ನಡೆದು ಬಂದ ಕಷ್ಟಗಳ ಹಾದಿಯನ್ನು ತಿಳಿಸುತ್ತದೆ. ಮಹಾ ರಾಜರಾಗಿದ್ದ ಭಗೀರಥರು ತ್ಯಾಗ, ಹಠ, ಛಲದಿಂದ ಸಾಧನೆ ಮಾಡಿದರು. ಪ್ರತಿಯೊಬ್ಬರೂ ತಮ್ಮಗುರಿ ಮುಟ್ಟಲು ಅಥವಾ ಸಾಧನೆ ಮಾಡಲು ಭಗೀರಥರ ಸತತ ಪರಿಶ್ರಮ, ತ್ಯಾಗ, ಛಲ, ಸದ್ಗುಣಗಳನ್ನು ಅನುಸರಿಸಬೇಕು. ದಾರ್ಶನಿಕರ ಜೀವನ ಚರಿತ್ರೆ, ಮೌಲ್ಯವನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕು. ಮಹರ್ಷಿ ಭಗೀರಥರು ತಮ್ಮ ತಪಸ್ವಿ ಶಕ್ತಿಯಿಂದ ಗಂಗೆಯನ್ನು ಧರೆಗೆ ತರುವ ಮೂಲಕ ಮಹಾಪುರುಷರು ಹಾಗು ಆಧ್ಯಾತ್ಮಿಕ ನಾಯಕರಾಗಿದ್ದಾರೆ. ಇಂತಹ ಮಹಾ ಪುರುಷರ ಜಯಂತಿ ನಮ್ಮೆಲ್ಲರ ಜೀವನದ ಪ್ರೇರಣಾ ಶಕ್ತಿಯಾಗಿದೆಯೆಂದರು.

ಭಗೀರಥ ಮಹರ್ಷಿಗಳ ಜಯಂತಿಯನ್ನು ಆಚರಣೆ ಮಾಡುವ ಜೊತೆಗೆ ಅವರ ಕೊಡುಗೆ ಯನ್ನು ಸ್ಮರಣೆ ಮಾಡಬೇಕು. ಅವರು ಗಂಗೆಯನ್ನು ಧರೆಗೆ ತರಲು ಪಟ್ಟ ಪ್ರಯತ್ನ ಹೆಚ್ಚಿನದಾಗಿದೆ. ಇಂಥಹ ಮಹಾ ಪುರುಷರ ಜಯಂತಿಯನ್ನು ಆಚರಣೆ ಮಾಡುವ ಮೂಲಕ ಜಗತ್ತಿಗೆ ಹಾಗೂ ಮುಂದಿನ ಪೀಳಿಗೆಗೆ ಅವರ ತತ್ವ, ಆದರ್ಶಗಳನ್ನು ತಿಳಿಸೋಣ ಎಂದರು.

ಉಪ್ಪಾರ ಸಮಾಜದ ಅಧ್ಯಕ್ಷ ಜನಾರ್ಧನ್, ಕಾರ್ಯದರ್ಶಿ ನವೀನ್ ಕುಮಾರ್, ಗುತ್ತಿಗೆದಾರ ದೇವರಾಜು, ಕೆಡಿಪಿ ಸದಸ್ಯ ಕಬ್ಬಾಳು ಮಹೇಶ್, ಟಿಎಪಿಸಿಎಂಎಸ್ ಅಧ್ಯಕ್ಷ ಹೆಚ್.ಆರ್. ವೆಂಕಟೇಶ್ ಮೂರ್ತಿ, ಸಮಾಜದ ಮುಖಂಡರಾದ ಲೋಕಿ, ಸಿ.ಡಿ. ನಾಗೇಂದ್ರ, ಸಿ.ಆರ್.ಸುರೇಶ್, ಸತೀಶ್, ಪ್ರವೀಣ್, ನಾಗೇಶ್, ಇ.ವಿ. ಮಂಜು, ಪಾಪಣ್ಣ ಇದ್ದರು.

## ಪ್ರತ್ಯೇಕ ಪ್ರಕರಣ: 6.80 ಲ.ರೂ. ಮೌಲ್ಯದ ಚಿನ್ನಾಭರಣ ಕಳವು

• ಪ್ರಜೋದಯ ವರದಿ

**ಹಾಸನ:** ಚನ್ನರಾಯಪಟ್ಟಣ ಹಾಗು ನಗರದ ಬಡಾವಣೆ ಠಾಣೆ ವ್ಯಾಪ್ತಿಯಲ್ಲಿ ನಡೆದ ಪ್ರತ್ಯೇಕ ಕಳವು ಪ್ರಕರಣಗಳಲ್ಲಿ ನಗದು ಸೇರಿ 6.80 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿರುವ ಘಟನೆ ನಡೆದಿದೆ.

ಬಿ.ಕಾಟೀಹಳ್ಳಿ ಕೊಪ್ಪಲು ನಿವಾಸಿ ರುದ್ರಮೂರ್ತಿ ಎಂಬುವವರ ಮನೆಗೆ ಏ.16ರಂದು ಹಾಡ ಹಗಲೇ ನುಗ್ಗಿರುವ ಕಳ್ಳರು 4.35 ಲಕ್ಷ ರೂ. ಬೆಲೆಯ ಚಿನ್ನಾಭರಣ ದೋಚಿದ್ದಾರೆ. ಅಂದು ರುದ್ರಮೂರ್ತಿ ಅವರ ಪತ್ನಿ ಬೇಲೂರಿಗೆ ತೆರಳಿದ್ದರು. ಮಗಳು ಕಾಲೇಜಿಗೆ ಹೋಗಿದ್ದರು. ಸಂಜೆ ವಾಪಾಸ್ ಬಂದು ನೋಡಿದಾಗ ಚಿನ್ನಾಭರಣ ನಾಪತ್ತೆಯಾಗಿವೆ. ಬೀರುವಿನಲ್ಲಿಟ್ಟಿದ್ದ 18 ಗ್ರಾಂ ತೂಕದ 3 ಜೊತೆ ಚಿನ್ನದ ಓಲೆ, 15 ಗ್ರಾಂ ತೂಕದ ಒಂದು ಚಿನ್ನದ ಸರ, 10 ಗ್ರಾಂನ 2 ಚಿನ್ನದ ಉಂಗುರ, 8 ಗ್ರಾಂ ನ ಒಂದು ಜೊತೆ ಚಿನ್ನದ ಓಲೆ ಕಳವಾಗಿದೆ. ಏ.14 ರಂದು ನೋಡಿದಾಗ ಆಭರಣಗಳೆಲ್ಲಾ ಇದ್ದವು. ಮನೆಯ ಬೀಗದ ಕೀಯನ್ನು ಮನೆಯ ಹೊರಗಿನ ಡಸ್ಟ್ ಬಿನ್ ಪಕ್ಕದ ಮ್ಯಾಟ್ ಕೆಳಗೆ ಇಟ್ಟು ಹೋಗಿದ್ದನ್ನು ನೋಡಿದ್ದ ಕಿಡಿಗೇಡಿಗಳು ಕೃತ್ಯ ಎಸಗಿದ್ದಾರೆ. ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ 2.45 ಲಕ್ಷ ರೂ. ಬೆಲೆಯ ಚಿನ್ನ ಹಾಗು ಬೆಳ್ಳಿ ಆಭರಣ ಕದ್ದಿರುವ ಘಟನೆ ಚನ್ನರಾಯಪಟ್ಟಣದ ಮಂಜುನಾಥ ನಗರದ ಶ್ವೇತಾ ಎಂಬುವವರ ಮನೆಯಲ್ಲಿ ನಡೆದಿದೆ. ಶ್ವೇತಾ ಅವರ ಪತಿ ಶ್ರೀನಿವಾಸ ಕಾರು ಚಾಲಕರಾಗಿದ್ದು, ವಾರಕ್ಕೊಮ್ಮೆ ಮನೆಗೆ ಬರುತ್ತಿದ್ದರು. ಏ.16ರಂದು ಶ್ವೇತಾ ಮನೆಗೆ ಬೀಗ ಹಾಕಿ ಪುತ್ರ ದಿಶಾಂತ್‌ನೊಂದಿಗೆ ಗಂಡನ ಮನೆ ಬೆಳಗುಲಿ ಗ್ರಾಮಕ್ಕೆ ಹೋಗಿದ್ದರು. ಏ. 22ರಂದು ವಾಪಾಸ್ ಬಂದು ನೋಡಿದಾಗ ಮನೆ ಮುಂದೆ ನಿಲ್ಲಿಸಿದ್ದ ಬೈಕ್ ಕಾಣೆಯಾಗಿತ್ತು. ಮನೆ ಬಾಗಿಲು ಒಡೆದಿದ್ದು, ಒಳಗೆ ಹೋಗಿ ನೋಡಿದಾಗ 50 ಸಾವಿರ ರೂ. ನಗದು, 27 ಗ್ರಾಂ ತೂಕದ ಚಿನ್ನದ ಸರ, 12 ಗ್ರಾಂ ತೂಕದ ಕೈ ಚೈನ್, 30 ಗ್ರಾಂನ ಒಂದು ಜೊತೆ ಬೆಳ್ಳಿ ಕಾಲು ಚೈನ್, 3 ವಾಚ್ ಕಳುವಾಗಿದೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಬಿಜೆಪಿಯ ಭರವಸೆ ಮುಂದೆ ಟಿಎಂಸಿ ಆಡಳಿತಕ್ಕೆ ಕೊನೆ

• ಪ್ರಜೋದಯ ವರದಿ



**ಮಥುರಾಪುರ (ಪಶ್ಚಿಮ ಬಂಗಾಳ):** ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣಾ ಫಲಿತಾಂಶ ಮೇ 4 ರಂದು ಪ್ರಕಟವಾಗಲಿದ್ದು, ಅಂದು ಟಿಎಂಸಿ ಆಡಳಿತದ ವಾಯಿದೆ ಮುಗಿಯಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದಾರೆ.

ದಕ್ಷಿಣ 24 ಪರಗಣ ಜಿಲ್ಲೆಯ ಕಾಕದ್ವೀಪ ಕ್ರೀಡಾಂಗಣದಲ್ಲಿ ಸಾರ್ವಜನಿಕ ಸಭೆಯನ್ನು ದ್ದೇಶಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಕಂಡುಬರುತ್ತಿರುವ ಭಾರಿ ಪ್ರಮಾಣದ ಮತದಾನವು ಟಿಎಂಸಿಯ ಭಯದ ಆಡಳಿತವು ಬಿಜೆಪಿಯ ಮೇಲಿನ ಭರವಸೆಯ ಮುಂದೆ ಖಂಡಿತವಾಗಿಯೂ ಸೋಲುತ್ತಿದೆ ಎಂಬುದನ್ನು ಸೂಚಿಸುತ್ತದೆಂದು ಪ್ರತಿಪಾದಿಸಿದರು.

ಬಂಗಾಳದಲ್ಲಿ ಲಂಚವಿಲ್ಲದೆ ಕೆಲಸ ನಡೆಯುವ ಒಂದೇ ಒಂದು ಕ್ಷೇತ್ರವೂ ಇಲ್ಲ. ಟಿಎಂಸಿ ಸಿಂಡಿಕೇಟ್‌ಗಳು ಮತ್ತು ಅವರ ಮಧ್ಯವರ್ತಿಗಳು ಲಂಚ ಪಡೆಯದೆ ಕೆಲಸ ಮಾಡುವುದಿಲ್ಲ. ಈ 15 ವರ್ಷಗಳ ಹಳೆಯ ಸಿಂಡಿಕೇಟ್ ವ್ಯವಸ್ಥೆ ಮತ್ತು ಟಿಎಂಸಿಯ ಮಹಾ ಜಂಗಲ್ ರಾಜ್ ಈಗ ತನ್ನ ಅವಧಿ ಮುಕ್ತಾಯದ ದಿನಾಂಕವನ್ನು ತಲುಪಿದೆ, ಅದುವೇ ಮೇ 4 ಎಂದು ಹೇಳಿದರು.

## 108 ಆ್ಯಂಬುಲೆನ್ಸ್ ನೌಕರರ ಬೇಡಿಕೆ ಈಡೇರಿಸಲು ಆಗ್ರಹ

**ಹಾಸನ:** ಆರೋಗ್ಯ ಕವಚ ಅಡಿಯಲ್ಲಿ ಕೆಲಸ ಮಾಡುತ್ತಿರುವ 108 ಆ್ಯಂಬ್ಯುಲೆನ್ಸ್ ನೌಕರರ ವಿವಿಧ ಬೇಡಿಕೆಗಳನ್ನು ಸರ್ಕಾರ ಈಡೇರಿಸಬೇಕೆಂದು 108 ಆ್ಯಂಬ್ಯುಲೆನ್ಸ್ ನೌಕರರ ಸಂಘದ ಮಾಜಿ ಸಂಘಟನಾ ಕಾರ್ಯದರ್ಶಿ ವಿ.ವೈ.ಯೋಗೇಶ್ ಅವರು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, 108 ಆರೋಗ್ಯ ಕವಚ ಸೇವೆಯಡಿ ನೇಮಕಗೊಂಡಿರುವ ಸಿಬ್ಬಂದಿಗೆ ಕನಿಷ್ಟ ವೇತನ ದರದಲ್ಲಿ ಮೂಲ ವೇತನ, ಅನುಭವ ಬೋನಸ್ ಹಾಗು ಕಾರ್ಯಕ್ಷಮತೆ ಆಧಾರಿತ ಪ್ರೋತ್ಸಾಹಧನ ನೀಡುವ ಸರ್ಕಾರದ ಆದೇಶವನ್ನು ನೌಕರರು ಸ್ವಾಗತಿಸಿದ್ದು, ಅದರಂತೆ ಕರ್ತವ್ಯ ನಿರ್ವಹಿಸಲು ಬದ್ಧರಾಗಿದ್ದಾರೆಂದರು.

ಆದರೆ, ಪ್ರಸ್ತುತ ಜಾರಿಯಲ್ಲಿರುವ ನಾಲ್ಕು ವಲಯವಾರು (ಝೋನ್) ಸೇವೆಯನ್ನು ಎರಡು ವಲಯಗಳಾಗಿ ಪರಿವರ್ತಿಸಿ ವೇತನ ವ್ಯವಸ್ಥೆಯನ್ನು ಸರಳಗೊಳಿಸಬೇಕು. 2008ರಿಂದ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಯನ್ನು ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಗೆ ಒಳಪಡಿಸದೆ ನೇರ ನೇಮಕಾತಿ ಮಾಡಬೇಕು. ಕರ್ತವ್ಯ ನಿರ್ವಹಿಸುವ ವೇಳೆ ಅಪಘಾತ ಅಥವಾ ಪ್ರಾಣಾಪಾಯ ಸಂಭವಿಸಿದಲ್ಲಿ ನೌಕರರಿಗೆ ಕನಿಷ್ಟ 50 ಲಕ್ಷ ರೂ. ಪರಿಹಾರ ನೀಡಬೇಕು. ಸೇವಾ ಹಿರಿತನ ಕಳೆದುಕೊಂಡಿರುವ ನೌಕರರನ್ನು ಪರಿಶೀಲಿಸಿ ಅವರಿಗೆ ನ್ಯಾಯ ಒದಗಿಸಬೇಕೆಂದು ಒತ್ತಾಯಿಸಿದರು.

ಬೇರೆ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯನ್ನು ತಮ್ಮ ಸ್ವಂತ ಜಿಲ್ಲೆಗಳಿಗೆ ವರ್ಗಾವಣೆ ಮಾಡಿಕೊಡಬೇಕು. ಸರ್ಕಾರವು 108 ನೌಕರರ ಸಮಸ್ಯೆಗಳತ್ತ ಗಮನಹರಿಸಿ ಶೀಘ್ರ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ನೌಕರರಾದ ಬಿ.ಕೆ.ಸುರೇಶ್, ಸಿ.ಎಂ.ನಟರಾಜ್ ಹಾಜರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK